**ಕರ್ನಾಟಕ ಸರ್ಕಾರ**

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**

Empowerment through livelihood

# ವಾರ್ಷಿಕ ವರದಿ 2017–18

## "ಸಂಜೀವಿನಿ"– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

**ಅಭಿಯಾನ ನಿರ್ದೇಶಕರ ಕಛೇರಿ,**

**ನಂ.55, ಅಭಯ ಸಂಕೀರ್ಣ, 4ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560020**

**ದೂ: 080–23083000, ಫ್ಯಾಕ್ಸ್: 080–23083013**

**ಇ–ಮೈಲ್: nrlmkarnataka@gmail.com**

## “ಸಂಜೀವಿನಿ”– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಸ್‌ಜಿಎಸ್‌ವೈ ಯೋಜನೆಯನ್ನು ಪುನರ್ ರಚಿಸಿ ಆಜೀವಿಕ – ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) 2010–11ರಿಂದ ಜಾರಿಗೊಳಿಸಿದೆ. ಇದರನ್ವಯ ರಾಜ್ಯ ಸರ್ಕಾರವು ರಾಜ್ಯದಲ್ಲಿ ಆಜೀವಿಕ ಯೋಜನೆಯನ್ನು “ಸಂಜೀವಿನಿ” ಹೆಸರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ (ಕೆಎಸ್‌ಆರ್‌ಎಲ್‌ಪಿಎಸ್) ಮೂಲಕ ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಪ್ರಥಮ ಹಂತದಲ್ಲಿ, ರಾಜ್ಯದ 5 ಜಿಲ್ಲೆಗಳ 20 ತಾಲ್ಲೂಕುಗಳಲ್ಲಿ ಯೋಜನೆಯನ್ನು ಇಂಟೆನ್ಸೀವ್ ತಾಲ್ಲೂಕುಗಳಾಗಿ (Intensive Block) ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳೆಂದರೆ, **ಮೈಸೂರು** ಜಿಲ್ಲೆ (ಹೆಚ್.ಡಿ. ಕೋಟೆ, ಹುಣಸೂರು, ನಂಜನಗೂಡು, ಟಿ.ನರಸೀಪುರ), **ತುಮಕೂರು** ಜಿಲ್ಲೆ (ಪಾವಗಡ, ಚಿಕ್ಕನಾಯಕನಹಳ್ಳಿ, ಮಧುಗಿರಿ, ಶಿರಾ), **ಗದಗ** ಜಿಲ್ಲೆ (ಶಿರಹಟ್ಟಿ, ನರಗುಂದ, ಗದಗ, ಮುಂಡರಗಿ, ರೋಣ), **ಕೊಪ್ಪಳ** ಜಿಲ್ಲೆ (ಯಲಬುರ್ಗಾ, ಕುಷ್ಟಗಿ, ಕೊಪ್ಪಳ) ಹಾಗೂ **ಉತ್ತರ ಕನ್ನಡ** ಜಿಲ್ಲೆ (ಅಂಕೋಲ, ಜೋಯಿಡ, ಕುಮುಟ, ಯಲ್ಲಾಪುರ). ಹಿಂದುಳಿದ ತಾಲ್ಲೂಕುಗಳನ್ನು ಪರಿಗಣಿಸಿರುವ ಡಾ॥ ನಂಜುಂಡಪ್ಪರವರ ಸಮಿತಿ ವರದಿ ಆಧಾರದ ಮೇಲೆ 2015–16ನೇ ಸಾಲಿನಲ್ಲಿ ಅಧಿಕ 64 ತಾಲ್ಲೂಕುಗಳನ್ನು ಇಂಟೆನ್ಸೀವ್ ವ್ಯಾಪ್ತಿಗೆ ಪರಿಗಣಿಸಲಾಗಿದೆ ಉಳಿದ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಹಂತಗಳಲ್ಲಿ ಇಂಟೆನ್ಸೀವ್ ಕಾರ್ಯ ವ್ಯಾಪ್ತಿಗೆ ಅಳವಡಿಸಲು ಅನುಮೋದನೆಯನ್ನು ದಿನಾಂಕ: 05.09.2015 ರಂದು ಸಂಜೀವಿನಿ ಸಂಸ್ಥೆಯ 5ನೇ ಕಾರ್ಯಕಾರಿ ಸಮಿತಿ ಮತ್ತು ದಿನಾಂಕ: 19–10–2015 ರಂದು ನಡೆದ ಮೊದಲನೇ ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–1 ಇಂಟೆನ್ಸೀವ್ ಕಾರ್ಯತಂತ್ರ ಹಂತವಾರು ಯೋಜನೆ**

| ಹಂತ | ವರ್ಷ | ಜಿಲ್ಲೆಗಳು | ತಾಲ್ಲೂಕುಗಳು |
|---|---|---|---|
| I | 2014–15 | 5 | 20 |
| II | 2015–16 | 20 | 64 |
| III | 2016–17 | 19 | 47 |
| IV | 2017–18 | 29 | 45 |
| V | 2018–19 | 30 | 176 |

**2017–18ನೇ ಸಾಲಿನಲ್ಲಿ “ಸಂಜೀವಿನಿ”– (ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ)ಯಡಿ ಸಾಧಿಸಿರುವ ಪ್ರಗತಿಯ ವಿವರ:**

ಕೆಎಸ್‌ಆರ್‌ಎಲ್‌ಎಂಗೆ ಸಂಬಂಧಿಸಿದಂತೆ 2017–18 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗೆ ಭಾರತ ಸರ್ಕಾರದ Empowered Committee ಯು ಚಟುವಟಿಕೆಗಳಿಗೆ ಅನುಮೋದಿಸಿ ಕೆಳಕಂಡಂತೆ ಹಂಚಿಕೆ ನೀಡಿದೆ.

**ಕೋಷ್ಟಕ–2 ವಾರ್ಷಿಕ ಕ್ರಿಯಾ ಯೋಜನೆ**

| ಕ್ರಮ ಸಂಖ್ಯೆ | ವಿವರ | ಹಂಚಿಕೆ (ರೂ.ಲಕ್ಷಗಳಲ್ಲಿ) | | |
|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು |
| 1 | ಎನ್‌ಆರ್‌ಎಲ್‌ಪಿ | **1164.60** | **776.40** | **1941.00** |
| 2 | ಎನ್‌ಆರ್‌ಎಲ್‌ಎಂ * (ಆಡಳಿತಾತ್ಮಕ ವೆಚ್ಚ ಸೇರಿ) | **12067.43** | **8044.95** | **20112.38** |
| 3 | ಡಿಡಿಯುಜಿಕೆವೈ | **14165.00** | **9443.00** | **23608.00** |
| 4 | ಆರ್‌ಸೆಟಿ | **726.00** | **0.00** | **726.00** |
| **5** | ಆರ್‌ಜಿಸಿವೈ | **0** | **2000.00** | **2000.00** |
| | **ಒಟ್ಟು** | **28123.03** | **20264.35** | **48387.38** |

**ನೇಮಕಾತಿ:**

ಕೆಎಸ್ಆರ್ಎಲ್ಎಂ ಅಭಿಯಾನಕ್ಕೆ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 291 ಅಧಿಕಾರಿ/ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ:

**ಕೋಷ್ಟಕ–3 ಸಿಬ್ಬಂದಿಗಳ ವಿವರ**

| ಘಟಕ | ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ |
|---|---|
| ರಾಜ್ಯ ಅಭಿಯಾನ ನಿರ್ವಹಣಾ ಘಟಕ (ಎಸ್ಎಂಎಂಯು) | 42 |
| ಜಿಲ್ಲಾ ಅಭಿಯಾನ ನಿರ್ವಹಣಾ ಘಟಕ (ಡಿಎಂಎಂಯು) | 66 |
| ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ (ಟಿಎಂಎಂಯು) | 214 |
| **ಒಟ್ಟು** | **322** |

**ಜಿಲ್ಲಾವಾರು ಸಿಬ್ಬಂದಿ ನೇಮಕಾತಿ ವಿವರ**

**ಕೋಷ್ಟಕ–4 ಜಿಲ್ಲಾವಾರು ಸಿಬ್ಬಂದಿಗಳ ವಿವರ**

| ಕ್ರ.ಸಂ | ಜಿಲ್ಲೆಯ ಹೆಸರು | ಡಿಎಂಎಂಯು | ಟಿಎಂಎಂಯು | ಒಟ್ಟು |
|---|---|---|---|---|
| 1 | ಮೈಸೂರು | 5 | 28 | **33** |
| 2 | ಉತ್ತರ ಕನ್ನಡ | 7 | 10 | **17** |
| 3 | ಗದಗ್ | 4 | 23 | **27** |
| 4 | ಕೊಪ್ಪಳ | 6 | 18 | **24** |
| 5 | ತುಮಕೂರು | 2 | 24 | **26** |
| 6 | ಎಸ್ಎಂಎಂಯು | 0 | 0 | **35** |
| 7 | ಬೆಂಗಳೂರು ಗ್ರಾಮಾಂತರ | 2 | 4 | **6** |
| 8 | ಬೆಂಗಳೂರು ನಗರ | 2 | 2 | **4** |
| 9 | ಬಾಗಲಕೋಟೆ | 1 | 2 | **3** |
| 10 | ಬಳ್ಳಾರಿ | 3 | 2 | **5** |
| 11 | ಬೆಳಗಾವಿ | 1 | 2 | **3** |
| 12 | ಬೀದರ್ | 2 | 7 | **9** |
| 13 | ವಿಜಯಪುರ | 1 | 5 | **6** |
| 14 | ಚಾಮರಾಜನಗರ | 1 | 5 | **6** |
| 15 | ಚಿಕ್ಕಬಳ್ಳಾಪುರ | 1 | 1 | **2** |
| 16 | ಚಿಕ್ಕಮಂಗಳುರು | 1 | 3 | **4** |
| 17 | ಚಿತ್ರದುರ್ಗ | 2 | 5 | **7** |
| 18 | ದಕ್ಷಿಣ ಕನ್ನಡ | 0 | 9 | **9** |
| 19 | ಧಾರವಾಡ | 3 | 1 | **4** |
| 20 | ದಾವಣಗೆರೆ | 3 | 13 | **16** |
| 21 | ಹಾಸನ | 1 | 6 | **7** |
| 22 | ಹಾವೇರಿ | 2 | 6 | **8** |
| 23 | ಕಲಬುರಗಿ | 3 | 0 | **3** |
| 24 | ಕೊಡಗು | 1 | 1 | **2** |
| 25 | ಕೋಲಾರ | 1 | 2 | **3** |

| ಕ್ರ.ಸಂ | ಜಿಲ್ಲೆಯ ಹೆಸರು | ಡಿಎಂಎಂಯು | ಟಿಎಂಎಂಯು | ಒಟ್ಟು |
|---|---|---|---|---|
| 26 | ಮಂಡ್ಯ | 0 | 15 | **15** |
| 27 | ರಾಯಚೂರು | 3 | 0 | **3** |
| 28 | ರಾಮನಗರ | 3 | 9 | **12** |
| 29 | ಶಿವಮೊಗ್ಗ | 3 | 6 | **9** |
| 30 | ಉಡುಪಿ | 0 | 5 | **5** |
| 31 | ಯಾದಗಿರಿ | 2 | 0 | **2** |
| **ಇಂಟೆನ್ಸಿವ್ ಒಟ್ಟು** | | **24** | **103** | **127** |
| **ಒಟ್ಟು** | | **42** | **111** | **153** |
| **ಮಹಾ ಒಟ್ಟು** | | **66** | **214** | **280** |

*ಸೂಚನೆ: ಜಿಲ್ಲಾವಾರು ಸಿಬ್ಬಂದಿ ಮಾಹಿತಿಯಂತೆ*

**ಸಾಂಸ್ಥಿಕ ಸಂಸ್ಥೆಗಳ ರಚನೆ ಮತ್ತು ಬಲವರ್ಧನೆ:**

ಬಡವರನ್ನು ಕ್ರೂಢೀಕರಿಸಿ ಅವರದೇ ಆದ ಸಂಸ್ಥೆಗಳನ್ನು ರಚಿಸಿ ಸಾಮರ್ಥ್ಯ ಬಲವರ್ಧನೆ ಮಾಡುವುದು ಬಡತನ ನಿರ್ಮೂಲನೆ ಮಾಡಲು ಅತ್ಯಗತ್ಯವಾಗಿರುತ್ತದೆ. ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನವು ಬಡತನದಲ್ಲಿರುವ ಎಲ್ಲಾ ಮಹಿಳೆಯರನ್ನು ಒಂದುಗೂಡಿಸಿ ಮಾಹಿತಿ ಪಡೆಯಲು ಮತ್ತು ವಿಷಯ ವಿನಿಮಯ ಮಾಡಿಕೊಳ್ಳಲು ಸಾಂಸ್ಥಿಕ ಸಂಘಟನೆಗಳು ಮತ್ತು ಸಂಸ್ಥೆಗಳನ್ನು ರಚಿಸುವುದರ ಮೂಲಕ ಕಡು ಬಡತನದಲ್ಲಿರುವ ಮಹಿಳೆಯರಿಗೆ ವೇದಿಕೆಯನ್ನು ಸೃಷ್ಠಿಸಲಾಗಿದೆ. ಬಡವರಿಂದ ಮತ್ತು ಬಡವರಿಗಾಗಿ ರಚಿಸಲ್ಪಟ್ಟ ಈ ಸಂಸ್ಥೆಗಳು ಸ್ಥಳೀಯ ಸರ್ಕಾರದೊಂದಿಗೆ, ವಿವಿಧ ಸೇವೆಗಳನ್ನು ನೀಡುತ್ತಿರುವ ಸಂಸ್ಥೆಗಳೊಂದಿಗೆ, ಬ್ಯಾಂಕ್‌ಗಳೊಂದಿಗೆ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಗಳೊಂದಿಗೆ ಹಾಗೂ ಇತರೆ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಿ ಸಾಮಾಜಿಕ ಮತ್ತು ಆರ್ಥಿಕ ಸೇವೆಗಳನ್ನು ಒದಗಿಸಲು ನೆರವಾಗುತ್ತವೆ. ವಿವಿಧ ಹಂತದಲ್ಲಿ ಸಂಸ್ಥೆಗಳನ್ನು ರಚಿಸುವುದರಿಂದ ಬಡ ಮಹಿಳೆಯರಿಗೆ ಒಗ್ಗಟ್ಟಾಗಿ ತಮ್ಮ ಹಕ್ಕುಗಳ ಬಗ್ಗೆ ಮಾತನಾಡಲು ಹೆಚ್ಚಿನ ಅವಕಾಶವನ್ನು ಕೊಡುವುದರೊಂದಿಗೆ ಆರ್ಥಿಕ ಸಮಾನತೆಯನ್ನು ಒದಗಿಸಲು ನೆರವಾಗುತ್ತೀವೆ.

ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅವರುಗಳ ಮೂಲಕ ಸಾಮಾಜಿಕ ಕ್ರೋಡೀಕರಣ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಸ್ವ ಸಹಾಯ ಗುಂಪುಗಳ ಸಾಮರ್ಥ್ಯ ಬಲವರ್ಧನೆ ಬಗ್ಗೆ ವಿಶ್ಲೇಷಿಸಿ ಅಗತ್ಯತೆಗೆ ಅನುಸಾರವಾಗಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟವು ಕಿರುಬಂಡವಾಳ ಹೂಡಿಕೆ ಯೋಜನೆ ತಯಾರಿಸಲು ಮತ್ತು ಸ್ವಸಹಾಯ ಗುಂಪುಗಳಿಗೆ ಕಿರು ಬಂಡವಾಳ ನಿಧಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕವನ್ನು ಕಲ್ಪಿಸಿ ಅಗತ್ಯತೆಗೆ ಅನುಸಾರವಾಗಿ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ಪಡೆಯಲು ಸಹಕಾರ ನೀಡುತ್ತಿವೆ. ಗ್ರಾಮೀಣ ಜೀವನೋಪಾಯ ಕಾರ್ಯಕ್ರಮದ ಭಾಗವಾಗಿ ಗ್ರಾಮ ಪಂಚಾಯತ್ ಜೊತೆಗೆ ಅಭಿಗಮನ ಕಾರ್ಯಕ್ರಮಗಳನ್ನು ಗ್ರಾಮ ಪಂಚಾಯತ್ ಒಕ್ಕೂಟವು ಕೈಗೊಳ್ಳುತ್ತೀವೆ.

| ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ವಿಸ್ತರಣೆ | | | | |
|---|---|---|---|---|
| **ಕ್ರ.ಸಂ** | **ಅವಧಿ** | **ತಾಲ್ಲೂಕುಗಳು** | **ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ** | **ಯೋಜನೆಗೆ ಒಳ ಪಟ್ಟ ಗ್ರಾಮ ಪಂಚಾಯಿತಿಗಳ ಸಂಖ್ಯೆ** |
| 1 | 2014–15 | 20 | 611 | 610 |
| 2 | 2015–16 | 64 | 2219 | 93 |
| 3 | 2016–17 | 47 | 1567 | 285 |
| 4 | 2017–18 | 0 | 0 | 731 |

| | | | | |
|---|---|---|---|---|
| | **ಒಟ್ಟು** | **131** | **4397** | **1719** |
| 2018–19 ನೇ ಸಾಲಿನಲ್ಲಿ 1626 ಗ್ರಾಮ ಪಂಚಾಯಿತಿಗಳಿಗೆ ಯೋಜನೆಯನ್ನು ವಿಸ್ತರಿಸುತ್ತಿದ್ದು, 2019–2020ನೇ ಸಾಲಿಗೆ ಬಾಕಿ ಇರುವ 2678 ಗ್ರಾಮ ಪಂಚಾಯಿತಿಗಳಿಗೆ ಯೋಜನೆಯನ್ನು ಒಳಪಡಿಸಲಾಗುತ್ತದೆ. | | | | |

- ಕಳೆದ ನಾಲ್ಕು ವರ್ಷಗಳಲ್ಲಿ ಸಂಜೀವಿನಿ ಯೋಜನೆಯಡಿಯಲ್ಲಿ ಸ್ವ ಸಹಾಯ ಗುಂಪುಗಳ ಬಲವರ್ಧನೆಗೆ ಹಲವಾರು ಕ್ರಮಗಳನ್ನು ಕೈಗೊಂಡು, ಕ್ಷೇತ್ರ ಮಟ್ಟದಲ್ಲಿ ಸ್ವ ಸಹಾಯ ಗುಂಪುಗಳನ್ನು ಒಗ್ಗೂಡಿಸಿ, ವಾರ್ಡ್ ಮತ್ತು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿದೆ.
- 2017–18 ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ ಸಾಮಾಜಿಕ ಕ್ರೂಢೀಕರಣದಡಿಯಲ್ಲಿ ಸುಮಾರು 733 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸಲಾಗಿರುತ್ತದೆ.
- ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿ/ಮುಖ್ಯ ಪುಸ್ತಕ ಬರಹಗಾರರ ಗೌರವಧನವನ್ನು ಸಂಬಂದಿಸಿದ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.
- 2017–18 ನೇ ಸಾಲಿನಲ್ಲಿ ಅಬ್ದುಲ್ ನಜ್ಹೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ(**SIRD**)ಯ ಮೂಲಕ ಸುಮಾರು 1601 ಜನ ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡಲಾಗಿರುತ್ತದೆ.
- 2017–18 ನೇ ಸಾಲಿನಲ್ಲಿ 265 ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳಿಗೆ ತಲಾ ರೂ.10000/–ಗಳಂತೆ ಪ್ರಾರಂಭಿಕ ನಿಧಿಯನ್ನು ಬಿಡುಗಡೆ ಮಾಡಲಾಗಿರುತ್ತದೆ.
- 2017–18 ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಯಲುಬುರ್ಗಾ ತಾಲ್ಲೂಕಿನ ಶ್ರೀ ಜಾನ್ಸಿ ರಾಣಿ ಸಂಜೀವಿನಿ ಮಹಿಳಾ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟವು ರಾಷ್ಟ್ರ ಮಟ್ಟದ ಪುರಸ್ಕಾರವನ್ನು ಪಡೆದಿರುತ್ತದೆ.

**ಕೋಷ್ಟಕ–5 ಇಂಟೆನ್ಸೀವ್ ತಾಲ್ಲೂಕುಗಳಲ್ಲಿನ ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆಯ ಪ್ರಗತಿ**

| ಕ್ರ. ಸಂ | ಘಟಕಗಳು | 2017–18 | |
|---|---|---|---|
| | | ಗುರಿ | ಸಾಧನೆ |
| 1 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮ ಪಂಚಾಯತ್‌ಗಳ ಸಂಖ್ಯೆ | 3260 | 733 |
| 2 | ಇಂಟೆನ್ಸೀವ್ ಕಾರ್ಯತಂತ್ರವನ್ನು ಪ್ರಾರಂಭಿಸಲಾಗುವ ಗ್ರಾಮಗಳ ಸಂಖ್ಯೆ | 11250 | 6590 |
| 3 | ಉತ್ತೇಜಿಸಲಾದ ಹೊಸ ಸ್ವ ಸಹಾಯ ಗುಂಪುಗಳ ಸಂಖ್ಯೆ | 18800 | 1198 |
| 4 | ಎನ್‌ಆರ್‌ಎಲ್‌ಎಂ ವ್ಯಾಪ್ತಿಗೆ ತಂದ ಇತರೆ ಸ್ವ ಸಹಾಯ ಗುಂಪುಗಳ ಸಂಖ್ಯೆ | 103840 | 30077 |
| 5 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ಎನ್‌ಆರ್‌ಎಲ್‌ಎಂ ವ್ಯಾಪ್ತಿಯಲ್ಲಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | 122640 | 31275 |
| 6 | ಮೂಲ ತರಬೇತಿ ನೀಡಿದ ಸ್ವ ಸಹಾಯ ಗುಂಪುಗಳ ಸಂಖ್ಯೆ | 38110 | 1105 |
| 7 | ಗುಣಮಟ್ಟ ಪುಸ್ತಕ ನಿರ್ವಹಣೆಯ ಅಭ್ಯಾಸಗಳನ್ನು ಪರಿಚಯಿಸಲಾದ ಸ್ವ ಸಹಾಯ ಗುಂಪಗಳ ಸಂಖ್ಯೆ | 0 | 281 |
| 8 | ನಿಯೋಜಿಸಲಾದ ಸ್ವ ಸಹಾಯ ಗುಂಪುಗಳ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | 18800 | 458 |
| 9 | ನಿಯೋಜಿಸಲಾದ ಮುಖ್ಯ ಪುಸ್ತಕ ನಿರ್ವಾಹಕರುಗಳ ಸಂಖ್ಯೆ | 3260 | 265 |
| 10 | ಪಂಚಸೂತ್ರವನ್ನು ಅನುಸರಿಸುತ್ತಿರುವ ಸ್ವ ಸಹಾಯ ಗುಂಪುಗಳ ಸಂಖ್ಯೆ | 44210 | 30347 |
| 11 | ಇಂಟೆನ್ಸೀವ್ ತಾಲ್ಲೂಕುಗಳಲ್ಲಿ ತರಬೇತಿ ಪಡೆದ ಆಂತರಿಕ ಸಮುದಾಯ ಸಂಪನ್ಮೂಲ | 2272 | 1601 |

| ಕ್ರ. ಸಂ | ಘಟಕಗಳು | 2017–18 | |
|---|---|---|---|
| | | ಗುರಿ | ಸಾಧನೆ |
| | ವ್ಯಕ್ತಿಗಳ ಸಂಖ್ಯೆ (ಮುಖ್ಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳು) | | |
| 12 | ರಚಿಸಲಾದ ವಾರ್ಡ್ ಮಟ್ಟದ ಒಕ್ಕೂಟಗಳ ಸಂಖ್ಯೆ | 16450 | 3979 |
| 13 | ವಾರ್ಡ್ ಮಟ್ಟದ ಒಕ್ಕೂಟಗಳಲ್ಲಿ ಸದಸ್ಯತ್ವ ಹೊಂದಿರುವ ಸ್ವಸಹಾಯ ಗುಂಪುಗಳ ಸಂಖ್ಯೆ | 122640 | 30170 |
| 14 | ರಚಿಸಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 3260 | 733 |
| 15 | ಆರಂಭಿಕ ನಿಧಿ ನೀಡಲಾದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸಂಖ್ಯೆ | 3810 | 301 |
| 16 | ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಇಅ ತರಬೇತಿಗಳ ಸಂಖ್ಯೆ | 3260 | 265 |
| 17 | ಪೂರ್ಣಗೊಳಿಸಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಸುತ್ತುಗಳ ಸಂಖ್ಯೆ | 3260 | 731 |
| 18 | ನೋಂದಣಿ ಮಾಡಿದ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ | 610 | 585 |

**ಕರ್ನಾಟಕ ಹಾಲು ಒಕ್ಕೂಟದ ಸಹಯೋಗದೊಂದಿಗೆ ಹೈನುಗಾರಿಕೆಯ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮ:**

ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಸಂಜೀವಿನಿಯು ಮೂರು ವರ್ಷಗಳ ಅವಧಿಗೆ ರಾಜ್ಯದ 30 ಜಿಲ್ಲೆಗಳಲ್ಲಿ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದೆ. ಈ ಕಾರ್ಯಕ್ರಮದ ಮೂಲಕ 250 ಮಹಿಳಾ ಹಾಲು ಒಕ್ಕೂಟಗಳನ್ನು ರಚಿಸುವ, 10,000 ಫಲಾನುಭವಿಗಳನ್ನು ಮುಟ್ಟುವ ಗುರಿಯನ್ನು ಹೊಂದಿದ್ದು, ಕೆಎಮ್‌ಎಫ್ (ಕರ್ನಾಟಕ ಹಾಲು ಒಕ್ಕೂಟ) ನ್ನು ಕಾರ್ಯಕ್ರಮದ ಅನುಷ್ಠಾನ ಪಾಲುದಾರರನ್ನಾಗಿ ಮಾಡಿಕೊಂಡಿರುತ್ತದೆ.

ಕಾರ್ಯಕ್ರಮದ ಒಟ್ಟು ಮೊತ್ತವು ರೂ.17.10 ಕೋಟಿಗಳಾಗಿರುತ್ತದೆ. ಅದರಲ್ಲಿ ಸಂಜೀವಿನಿಯು ರೂ.14.85 ಕೋಟಿಗಳನ್ನು, ಯೋಜನೆಯ ಅನುಷ್ಠಾನ ಪಾಲುದಾರರಾದ ಕೆಎಮ್‌ಎಫ್ ರೂ.2.25 ಕೋಟಿಗಳನ್ನು ಭರಿಸುವುದು. ಮಾರ್ಚ್ 2017ರ ಮಾಹೆ ರವರೆಗೆ ಮೊದಲನೇ, ಎರಡನೇ ಮತ್ತು ಮೂರನೇ ಕಂತಿನ ಅನುದಾನವಾಗಿ ಸಂಜೀವಿನಿಯು ರೂ.10.66 ಕೋಟಿಗಳನ್ನು ಅನುಷ್ಠಾನ ಸಂಸ್ಥೆಯಾದ ಕೆಎಮ್‌ಎಫ್ ಸಂಸ್ಥೆಗೆ ಬಿಡುಗಡೆ ಮಾಡಿರುತ್ತದೆ.

**ಕೋಷ್ಟಕ–6 2017–18 ನೇ ಸಾಲಿನಲ್ಲಿ ಸಾಧಿಸಲಾಗಿರುವ ಪ್ರಗತಿ**

| ಕಾರ್ಯಕ್ರಮ ಅನುಷ್ಠಾನ ಸಂಸ್ಥೆ | ಪ್ರದೇಶ | | ಆಯ್ಕೆಯಾದ ಫಲಾನುಭವಿಗಳ ವಿವರ | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಮಂಜೂರಾಗಿರುವ ಅನುದಾನ | ಖರ್ಚು ಮಾಡಲಾಗಿರುವ ಅನುದಾನ |
| ಕೆಎಮ್‌ಎಫ್ | 30 | 56 | 2800 | 2800 | 287.25 | 275.25 |

ಪ್ರಸಕ್ತ ಆರ್ಥಿಕ ವರ್ಷ 2017–18 ರಲ್ಲಿ 70 ಮಹಿಳಾ ಹಾಲು ಒಕ್ಕೂಟಗಳಿಂದ, 2,880 ಅರ್ಹ ಮಹಿಳಾ ಫಲಾನುಭವಿಗಳು ಯೋಜನೆಯ ಮೂಲಕ ಪಶು ಆರೋಗ್ಯ ಕುರಿತು ಪ್ರಾಥಮಿಕ ಅಭಿಶಿಕ್ಷಣ ತರಬೇತಿಯನ್ನು ನೀಡಲಾಗಿರುತ್ತದೆ. ಪಶು ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ಫಲಾನುಭವಿಗಳಿಗೆ ಸ್ಥಳೀಯ ಹಂತದಲ್ಲಿ ತರಬೇತಿ ನೀಡಬಹುದಾದ 70 ಮಹಿಳಾ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದ್ದು, ಅವರುಗಳಿಗೆ ಪಶು ಆರೈಕೆ ಮತ್ತು ನಿರ್ವಹಣೆ ಕುರಿತು ತರಬೇತಿಯನ್ನು ನೀಡಲಾಗಿರುತ್ತದೆ. 369 ಫಲಾನುಭವಿಗಳು ರೂ.10,000 ಮೊತ್ತದ ಹಂಚಿನ ನಿಧಿಯ ಮತ್ತು

ಬ್ಯಾಂಕ್ ಸಾಲದ ಸೌಲಭ್ಯದೊಂದಿಗೆ ಕರಾವಿನ ಹಸುವನ್ನು ಕೊಂಡುಕೊಂಡಿರುತ್ತಾರೆ. ಈವರೆಗೆ 136 ಸ್ವ ಸಹಾಯ ಗುಂಪುಗಳನ್ನು ಗ್ರಾಮೀಣ ಮಟ್ಟದಲ್ಲಿ ಗುರುತಿಸಲಾಗಿದ್ದು, ಉಳಿತಾಯ ಮೊತ್ತವು ರೂ. 9.91 ಲಕ್ಷಗಳಾಗಿರುತ್ತದೆ ಹಾಗೂ ಸದರಿ ಸ್ವ ಸಹಾಯ ಗುಂಪುಗಳಿಗೆ ರೂ. 30 ಲಕ್ಷಗಳ ಬ್ಯಾಂಕ್ ಸಾಲ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ.

**ಕೋಷ್ಟಕ–7 ಅನುಷ್ಠಾನ ಜಿಲ್ಲೆಗಳಲ್ಲಿ ಕೈಗೊಂಡಿರುವ ಅರಿವು ಕಾರ್ಯಕ್ರಮಗಳ ವಿವರ**

| ಅರಿವು ಕಾರ್ಯಕ್ರಮಗಳು | ಕೈಗೊಳ್ಳಲಾದ ಅರಿವು ಕಾರ್ಯಕ್ರಮಗಳ ಸಂಖ್ಯೆ | ಫಲಾನುಭವಿಗಳ ಸಂಖ್ಯೆ |
|---|---|---|
| ಆರೋಗ್ಯ ಮತ್ತು ಪೌಷ್ಠಿಕಾಂಶ–3 ದಿನಗಳು | 137 | 5993 |
| ಲಿಂಗತ್ವ ಅರಿವು ಕಾರ್ಯಕ್ರಮ–2 ದಿನಗಳು | 97 | 4269 |
| ಕಾನೂನು ಸಾಕ್ಷರತೆ–3 ದಿನಗಳು | 130 | 5826 |
| ಶಿಶು ಮತ್ತು ಮಕ್ಕಳ ಪೋಷಣೆ– 1 ದಿನ | 54 | 2228 |
| ಪುರುಷ ಅಭಿಗಮನ ಕಾರ್ಯಕ್ರಮ– 1 ದಿನ | 51 | 2013 |

**ಕ್ಷೀರ ಸಂಜೀವಿನಿ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- 30 ಜಿಲ್ಲೆಗಳಲ್ಲಿನ 250 ಮಹಿಳಾ ಹಾಲು ಒಕ್ಕೂಟಗಳ ಒಟ್ಟು 10,000 ಮಹಿಳೆಯರಿಗೆ ಪಶು ಮತ್ತು ಹೈನುಗಾರಿಕೆ ಸಾಕಾಣಿಕೆ ಮತ್ತು ನಿರ್ವಹಣೆ ಕುರಿತು ತರಬೇತಿಯನ್ನು ನೀಡಲಾಗಿರುತ್ತದೆ. ಇದರಲ್ಲಿ ಪ.ಜಾತಿ 2109, ಪ.ಪಂಗಡ 970, ಅಲ್ಪಸಂಖ್ಯಾತ ವರ್ಗ 426 ಮತ್ತು ಇತರೆ ವರ್ಗಕ್ಕೆ ಸೇರಿದ 6,495 ಫಲಾನುಭವಿಗಳಿರುತ್ತಾರೆ. ಜೊತೆಗೆ, 243 ಅಧ್ಯಕ್ಷರುಗಳು, 215 ಕಾರ್ಯದರ್ಶಿಗಳು ಮತ್ತು 1942 ಪದಾಧಿಕಾರಿಗಳಿಗೆ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಆಯೋಜಿಸಲಾಗಿರುತ್ತದೆ. 702 ಫಲಾನುಭವಿಗಳಿಗೆ ಕಲಿಕಾ ಪ್ರವಾಸವನ್ನು ಗುಜರಾತ್‌ನ ಅಮುಲ್ ಹಾಲು ಉತ್ಪಾದನಾ ಘಟಕಕ್ಕೆ ಆಯೋಜಿಸಲಾಗಿರುತ್ತದೆ. 241 ಮಹಿಳಾ ಸಂಪನ್ಮೂಲ ವ್ಯಕ್ತಿಗಳಿಗೆ ಪಶು ನಿರ್ವಹಣೆ ಮತ್ತು ಹೈನುಗಾರಿಕೆ ಹಾಗೂ ಸ್ವ ಸಹಾಯ ಗುಂಪುಗಳ ಪರಿಕಲ್ಪನೆ ಕುರಿತು ತರಬೇತಿ ನೀಡಲಾಗಿದ್ದು, ಸದರಿಯವರು ಮಹಿಳಾ ಹಾಲು ಒಕ್ಕೂಟದ ಫಲಾನುಭವಿಗಳಿಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ.
- ಈ ವರೆಗೆ 493 ಸ್ವ ಸಹಾಯ ಗುಂಪುಗಳನ್ನು (ಪ್ರತಿ ಗುಂಪಿಗೆ 17–20 ಸದಸ್ಯರಿರುತ್ತಾರೆ) ಗ್ರಾಮೀಣ ಮಟ್ಟದಲ್ಲಿ ರಚಿಸಲಾಗಿದ್ದು, ಅಗತ್ಯ ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ ಆಯೋಜಿಸಲಾಗಿದೆ. ಉಳಿತಾಯ ಮೊತ್ತವು ರೂ.120.96 ಲಕ್ಷಗಳಾಗಿರುತ್ತದೆ, ಇದು ಪ್ರತಿ ಗುಂಪಿಗೆ ಸರಿ ಸುಮಾರು ರೂ.24,535/– ಗಳಾಗುವುದು. ಮುಂದುವರೆದು, ಸದರಿ ಸ್ವ ಸಹಾಯ ಗುಂಪುಗಳಿಗೆ ರೂ.200.00 ಲಕ್ಷಗಳ ಬ್ಯಾಂಕ್ ಸಾಲ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ, ಪ್ರತಿ ಗುಂಪಿಗೆ ಸರಾಸರಿ ರೂ.40,568/– ಆಗಿರುತ್ತದೆ.
- ಜೀವನೋಪಾಯಕ್ಕೆ ಸಂಬಂಧಿಸಿದಂತೆ, 3,992 ಫಲಾನುಭವಿಗಳು ರೂ.10,000 ಮೊತ್ತದ ಹಂಚಿನ ನಿಧಿಯ ಮತ್ತು ಬ್ಯಾಂಕ್ ಸಾಲದ ಸೌಲಭ್ಯದೊಂದಿಗೆ ಕರಾವಿನ ಹಸುವನ್ನು ಕೊಂಡುಕೊಂಡಿರುತ್ತಾರೆ. ಈ ಉದ್ದೇಶಕ್ಕಾಗಿ ರೂ. 1596.80 ಲಕ್ಷ ಮೊತ್ತದ ಬ್ಯಾಂಕ್ ಸಾಲ ಸಂಪರ್ಕ ಕಲ್ಪಿಸಲಾಗಿರುತ್ತದೆ. ಇದು ಈವರೆಗೆ ಜೀವನೋಪಾಯ ಉದ್ದೇಶಕ್ಕಾಗಿ ಹೊಂದಲಾಗಿರುವ ಶೇ. 80 ರಷ್ಟು ಪಾಲನ್ನು ಹೊಂದಿರುತ್ತದೆ. (ಈ ಉದ್ದೇಶಕ್ಕಾಗಿ ತೊಡಗಿಸಲಾಗಿರುವ ಮೊತ್ತವು ಈವರೆಗೆ ರೂ.1,996 ಲಕ್ಷಗಳಾಗಿರುತ್ತದೆ)

  *ವಿ.ಸೂ.: 2017–18 ನೇ ಸಾಲಿನಲ್ಲಿ ಇರುವ ಪ್ರಗತಿ ಮುಂದುವರೆದಿದೆ.*

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ (ಎಂಕೆಎಸ್‌ಪಿ):**

ಕೃಷಿಯಲ್ಲಿ ಮಹಿಳೆಯರ ಪರಿಸ್ಥಿತಿ ಸುಧಾರಣೆ ಮತ್ತು ಮಹಿಳಾ ಸಬಲೀಕರಣದ ಅವಕಾಶಗಳ ಅಭಿವೃದ್ಧಿಗಾಗಿ ಭಾರತ ಸರ್ಕಾರವು "ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ" ಕಾರ್ಯಕ್ರಮವನ್ನು ಎನ್‌ಆರ್‌ಎಲ್‌ಎಮ್ ಕಾರ್ಯಕ್ರಮದ ಉಪ ಘಟಕವಾಗಿ ಜಾರಿಗೆ ತಂದಿರುತ್ತದೆ. ಎಮ್‌ಕೆಎಸ್‌ಪಿ ಕಾರ್ಯಕ್ರಮದ ಪ್ರಾಥಮಿಕ ಉದ್ದೇಶವು ವ್ಯವಸ್ಥಿತವಾದ ಹೂಡಿಕೆ ಮೂಲಕ ಕೃಷಿರಂಗದಲ್ಲಿ ಮಹಿಳೆಯರ ಭಾಗವಹಿಸುವಿಕೆ ಮತ್ತು ಉತ್ಪಾದನೆ ಹೆಚ್ಚಿಸಿ, ತನ್ಮೂಲಕ ಗ್ರಾಮೀಣ ಮಹಿಳೆಯರಲ್ಲಿ ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವುದು ಮತ್ತು ಸ್ಥಿರಗೊಳಿಸುವುದಾಗಿದೆ. ರಾಜ್ಯ ಸರ್ಕಾರದಿಂದ ಸಲ್ಲಿಸಿದ ಅನುಮೋದಿತ ಪ್ರಸ್ತಾವನೆಗಳಿಗೆ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಶೇ.75 ರಷ್ಟು ಅನುದಾನವನ್ನು/ಹಣಕಾಸಿನ ಬೆಂಬಲವನ್ನು ಒದಗಿಸುವುದು. ಉಳಿಕೆ ಅನುದಾನವನ್ನು ರಾಜ್ಯ ಸರ್ಕಾರವು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯ ಮೂಲಕ ನೀಡುವುದು.

ಭಾರತ ಸರ್ಕಾರವು ಗ್ರೀನ್ ಫೌಂಡೇಷನ್ ಸಂಸ್ಥೆಗೆ (ಪಿಐಎ) ರಾಮನಗರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಎಮ್‌ಕೆಎಸ್‌ಪಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ.6.25 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿರುತ್ತದೆ, ಈವರೆಗೆ ರೂ.4.62 ಕೋಟಿಗಳನ್ನು ಖರ್ಚು ಮಾಡಲಾಗಿರುತ್ತದೆ. ಪ್ರಸ್ತುತ ಕಾರ್ಯಕ್ರಮವನ್ನು ಅಂತಿಮಗೊಳಿಸಿದ್ದು, ಮೌಲ್ಯಮಾಪನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಅಂತೆಯೇ, ಭಾರತ ಸರ್ಕಾರವು ಇನಿಷಿಯೇಟಿವ್ ಫಾರ್ ಡೆವಲಪ್‌ಮೆಂಟ್ (ಐಡಿಎಫ್) ಸಂಸ್ಥೆಗೆ ತುಮಕೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ರೂ.15 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಿದೆ. 2014-15ನೇ ಸಾಲಿನಲ್ಲಿ ಸದರಿ ಸಂಸ್ಥೆಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಮೊದಲನೇ ಕಂತಿನ ಮೊತ್ತ ರೂ.3.75 ಕೋಟಿಗಳನ್ನು ಮಂಜೂರು ಮಾಡಲಾಗಿದೆ. ಜೊತೆಗೆ ಈ ಕಾರ್ಯಕ್ರಮವು ಸೆಪ್ಟೆಂಬರ್ ಮಾಹೆ 2016ಕ್ಕೆ ಮುಕ್ತಾಯಗೊಂಡಿರುತ್ತದೆ.

ಮುಂದುವರೆದು ಕಲುಬುರಗಿ ಜಿಲ್ಲೆಯ ಮೈರಾಡ ಸಂಸ್ಥೆಗೆ ಎಮ್‌ಕೆಎಸ್‌ಪಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.3.21 ಕೋಟಿ ಮೊತ್ತದ ಯೋಜನೆಯನ್ನು ಮಂಜೂರು ಮಾಡಲಾಗಿದ್ದು, 2014-15 ನೇ ಸಾಲಿನಲ್ಲಿ ಮೊದಲನೇ ಕಂತಿನ ಹಣವಾಗಿ ಕೇಂದ್ರ ಸರ್ಕಾರವು ರೂ.0.6016 ಕೋಟಿಗಳನ್ನು ಮೈರಾಡ ಸಂಸ್ಥೆಗೆ ಮಂಜೂರು ಮಾಡಿರುತ್ತದೆ. ಅದರಂತೆ ಮುಂದುವರೆದು 2015-16 ರಲ್ಲಿ ರಾಜ್ಯ ಸರ್ಕಾರದ ಅನುದಾನ ರೂ.0.20 ಕೋಟಿಗಳನ್ನು ಮಂಜೂರು ಮಾಡಿದ್ದು, 2016-17 ನೇ ಸಾಲಿನಲ್ಲಿ ರೂ. 80.16 ಹಾಗೂ 2017-18 ನೇ ಸಾಲಿಗೆ ರೂ.160.445 ಲಕ್ಷಗಳ ಅನುದಾನ ಬಿಡುಗಡೆ ಮಾಡಿದ್ದು, ಇದರಲಲಿ ರೂ.51.26 ಲಕ್ಷಗಳ ವೆಚ್ಚ ಮಾಡಲಾಗಿದೆ.

**ಕೋಷ್ಟಕ-8 2017-18 ನೇ ಸಾಲಿನಲ್ಲಿ ಸಾಧಿಸಲಾಗಿರುವ ಪ್ರಗತಿ**

| ಕಾರ್ಯಕ್ರಮ ಅನುಷ್ಠಾನ ಸಂಸ್ಥೆ | ಪ್ರದೇಶ | | ಆಯ್ಕೆಯಾದ ಫಲಾನುಭವಿಗಳ ವಿವರ | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | |
|---|---|---|---|---|---|---|
| | ಜಿಲ್ಲೆ | ತಾಲ್ಲೂಕು | ಗುರಿ | ಸಾಧನೆ | ಬಿಡುಗಡೆ | ವೆಚ್ಚ |
| ಐಡಿಎಫ್ | ಬೆಳಗಾಂ | ರಾಯಬಾಗ್ | 11000 | 11000 | 354.00 | 354.00 |
| | ತುಮಕೂರು | ಗುಬ್ಬಿ | | | | |
| ಮೈರಾಡ | ಕಲ್ಬುರ್ಗಿ | ಸೇಡಂ | 3000 | 3000 | 160.445 | 51.26 |
| **ಒಟ್ಟು** | | | **14000** | **14000** | **514.445** | **405.26** |

ಪ್ರಸಕ್ತ ಸಾಲಿನಲ್ಲಿ ಅನುಷ್ಠಾನ ಸಂಸ್ಥೆಗಳಾದ ಐಡಿಎಫ್ ಮತ್ತು ಮೈರಾಡ ಸಂಸ್ಥೆಗಳಿಗೆ ರೂ. 354.00 ಲಕ್ಷ ಹಾಗೂ ರೂ. 160.445 ಲಕ್ಷ ಅನುದಾನವನ್ನು ಕ್ರಮವಾಗಿ ಮಂಜೂರು ಮಾಡಲಾಗಿದೆ, ಈವರೆಗೆ ಯೋಜನೆಯ ಅನುಷ್ಠಾನಕ್ಕಾಗಿ ರೂ.514.445 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಐಡಿಎಫ್ ಮತ್ತು ಮೈರಾಡ ಸಂಸ್ಥೆಗಳು ಕಾರ್ಯಕ್ರಮ

ಅನುಷ್ಠಾನ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳಿಗೆ ಕಳೆದ ಮೂರು ವರ್ಷಗಳಿಂದ ಮಂಜೂರು ಮಾಡಲಾಗಿರುವ ಒಟ್ಟಾರೆ ಅನುದಾನ ರೂ.405.26 ಲಕ್ಷಗಳಾಗಿದ್ದು, ಶೇ.100 ರಷ್ಟು ಮಂಜೂರಾದ ಮೊತ್ತವನ್ನು ಅನುಷ್ಠಾನ ಜಿಲ್ಲೆಗಳಾದ ತುಮಕೂರು, ಬೆಳಗಾಂ ಮತ್ತು ಕಲ್ಬುರ್ಗಿಯಲ್ಲಿ ಕಾರ್ಯಕ್ರಮ ಅನುಷ್ಠಾನದ ಉದ್ದೇಶಕ್ಕಾಗಿ ಬಳಸಲಾಗಿದ್ದು, ಒಟ್ಟು 14,000 ಮಹಿಳಾ ಕಿಸಾನ್‌ರವರು ಫಲಾನುಭವಿಗಳಾಗಿರುತ್ತಾರೆ.

**ಮಹಿಳಾ ಕಿಸಾನ್ ಸಶಕ್ತೀಕರಣ ಪರಿಯೋಜನೆ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- ಸ್ಥಿರ ಕೃಷಿ ಪದ್ದತಿ ಮತ್ತು ಇತರೆ ಕೃಷಿ ಸಂಬಂಧಿತ ಪ್ರಮುಖ ಚಟುವಟಿಕೆಗಳ ಕುರಿತು ಕಾರ್ಯಕ್ರಮ ಅನುಷ್ಠಾನದ ಐದು ಜಿಲ್ಲೆಗಳಲ್ಲಿ (ತುಮಕೂರು–ಗುಬ್ಬಿ ತಾಲ್ಲೂಕು, ಚಿತ್ರದುರ್ಗ–ಚಳ್ಳಕೆರೆ ತಾಲ್ಲೂಕು, ರಾಮನಗರ–ಕನಕಪುರ ತಾಲ್ಲೂಕು, ಬೆಳಗಾವಿ–ರಾಯಬಾಗ್ ತಾಲ್ಲೂಕು ಮತ್ತು ಗುಲ್ಬರ್ಗಾ–ಸೇಡಂ ತಾಲ್ಲೂಕು) ಒಟ್ಟಾರೆ 19,000 ಫಲಾನುಭವಿಗಳಿಗೆ ಸೌಲಭ್ಯ ದೊರಕಿಸಲಾಗಿರುತ್ತದೆ.
- ಕಾರ್ಯಕ್ರಮದ ಉದ್ದೇಶದಂತೆ, 22 ಒಕ್ಕೂಟಗಳನ್ನು, 220 ಉತ್ಪಾದಕರ ಗುಂಪುಗಳನ್ನು ರಚಿಸಲಾಗಿರುತ್ತದೆ.
- 1,141 ಸ್ವ ಸಹಾಯ ಗುಂಪುಗಳನ್ನು ರಚಿಸಲಾಗಿದ್ದು, ಈವರೆಗೆ ರೂ.6931 ಲಕ್ಷ ಸಾಲ ಸಂಪರ್ಕವನ್ನು ಒದಗಿಸಲಾಗಿರುತ್ತದೆ.
- ಈವರೆಗೆ 392 ಸಮುದಾಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದ್ದು, ತರಬೇತಿ ನೀಡಲಾಗಿದ್ದು, ಇವರ ಮೂಲಕ ಫಲಾನುಭವಿಗಳಿಗೆ ಕ್ಷೇತ್ರಮಟ್ಟದಲ್ಲಿ ಸ್ಥಿರ ಕೃಷಿ ಪದ್ಧತಿ ಕುರಿತು ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿರುತ್ತಾರೆ.
- ಕೃಷಿಕ್ಷೇತ್ರದಲ್ಲಿ ಮಹಿಳೆಯರಿಗೆ ಅನಾವಶ್ಯಕ ಪರಿಶ್ರಮವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ಅದರಲ್ಲಿ 2,900 ಹೊಗೆ ರಹಿತ ಒಲೆಗಳನ್ನು ಮತ್ತು 325 ಜೋಳಿಗೆ ಸ್ಪ್ರೇಗಳನ್ನು ವಿತರಿಸಲಾಗಿದೆ. 3,365 ಫಲಾನುಭವಿಗಳ ಮನೆಯ ಹಿಂಬದಿಯಲ್ಲಿ ಹಿತ್ತಲು ತೋಟವನ್ನು ಮಾಡಲಾಗಿದೆ.
- ಫಲಾನುಭವಿಗಳ ಕೃಷಿ ಸಂಬಂಧಿತ ಜ್ಞಾನದ ಉತ್ತಮ ಗ್ರಹಿಕೆಗಾಗಿ ಮತ್ತು ಅರ್ಥಮಾಡಿಸುವಿಕೆ ಕುರಿತು ಅಭಿವೃದ್ದಿಪಡಿಸುವಿಕೆಗೆ ಸಂಬಂಧಿಸಿದಂತೆ 283 ಆಡಿಯೋ ದೃಶ್ಯ ಸಾಧನಗಳನ್ನು ಸ್ಥಿರ ಕೃಷಿ ಪದ್ದತಿಯ ವಿವಿಧ ವಿಷಯಗಳು ಮತ್ತು ಪದ್ದತಿಗಳನ್ನು ಕುರಿತು ತಯಾರಿಸಲಾಗಿದ್ದು, ಇವುಗಳನ್ನು ಗ್ರಾಮ ಮಟ್ಟದಲ್ಲಿ ಮಹಿಳಾ ಕೃಷಿಕರಿಗೆ ಕೃಷಿ ಕುರಿತ ಸಾಮರ್ಥ್ಯ ಬಲವರ್ಧನೆಗೆ ಉಪಯೋಗಿಸಲಾಗುತ್ತಿದೆ.

**ಮೈಕ್ರೋ ಎಂಟರ್‌ಪ್ರೈಸ್ ಕನ್ಸಲ್‌ಟೆಂಟ್ ಪ್ರಾಜೆಕ್ಟ್: (ಸಮುದಾಯ ಆಧಾರಿತ ಸಂಪನ್ಮೂಲಗಳ ಪೂರೈಕೆ ಮತ್ತು ಬೆಂಬಲದೊಂದಿಗೆ ಕಿರು ಉದ್ಯಮಗಳ ಅಭಿವೃದ್ದಿ)**

ಕಿರು ಉದ್ಯಮಗಳ ಮೂಲಕ ಸ್ವ ಉದ್ಯೋಗ ರಂಗವನ್ನು ಅಭಿವೃದ್ದಿಪಡಿಸುವುದು ಭಾರತ ಸರ್ಕಾರದ ಜೀವನೋಪಾಯ ಚಟುವಟಿಕೆಯ ಪ್ರಮುಖ ಕಾರ್ಯತಂತ್ರವಾಗಿದ್ದು, ಸ್ವ ಉದ್ದಿಮೆ ಕ್ಷೇತ್ರದ ಮೂಲಕ ಗ್ರಾಮೀಣ ಬಡಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ರೂಪಿಸುವ ಯೋಜನೆಯನ್ನು ಅನುಷ್ಠಾನ ಮಾಡಲು ಇರುವ ಪ್ರಮುಖ ತೊಡಕೆಂದರೆ ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆದಾರರಿಗೆ ಅವಶ್ಯ ಮಾರ್ಗದರ್ಶನ ಮತ್ತು ಅನುಸರಣೆಯನ್ನು ಒದಗಿಸುವ ನಿಟ್ಟಿನಲ್ಲಿ ಯಾವುದೇ ವ್ಯವಸ್ಥೆಯನ್ನು ರಚಿಸದಿರುವುದು.

ಈ ಅಂಶವನ್ನು ತೀಕ್ಷ್ಣವಾಗಿ ಪರಿಗಣಿಸಿದ ಕೆಎಸ್‌ಆರ್‌ಎಲ್‌ಪಿಎಸ್–ಸಂಜೀವಿನಿ ಸಂಸ್ಥೆಯು ಕಿರು ಉದ್ದಿಮೆಗಳ ಸಮಾಲೋಚಕರ (ಒಥಿಡಿಔ ಇಟಿಣಜಡಿಠಿಡಿಜ ಅಔಟಿಚಿಟಣಚಿಟಿಣ) ಕಾರ್ಯಕ್ರಮವನ್ನು ರಾಜ್ಯದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಮಾಡುವ ಉದ್ದೇಶದಿಂದ ರಾಷ್ಟೀಯ ಸಂಪನ್ಮೂಲ ಸಂಸ್ಥೆಯಾದ ಕುಡುಂಬಶ್ರೀ ಸಂಸ್ಥೆ–ಕೇರಳ ರವರೊಂದಿಗೆ ಮೂರು ವರ್ಷಗಳ ಅವಧಿಗೆ ಒಡಬಂಡಿಕೆಯನ್ನು ಮಾಡಿಕೊಂಡು, ಪ್ರಾಯೋಗಿಕವಾಗಿ ರಾಜ್ಯದ ಆಯ್ದ ಮೂರು ಜಿಲ್ಲೆಗಳಲ್ಲಿ (ಗದಗ, ಹಾಸನ ಮತ್ತು ಮೈಸೂರು) ಅನುಷ್ಠಾನಗೊಳಿಸುತ್ತಿದೆ. ಇದರ ಪ್ರಕ್ರಿಯೆಯಲ್ಲಿ ಸ್ಥಳೀಯ ಮಟ್ಟದಲ್ಲಿ

ಅರ್ಹ ಮಹಿಳೆಯರನ್ನು ಹಾಗೂ ಪುರುಷರನ್ನು ಗುರುತಿಸಿ, ಅವರುಗಳಿಗೆ ಕಿರು ಉದ್ದಿಮೆಗಳ ರಚನೆ, ನಿರ್ವಹಣೆ ಮತ್ತು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ವಿಸ್ತೃತ ತರಬೇತಿಗಳನ್ನು ನೀಡಿದ್ದು, ಅವಶ್ಯ ಸಾಮರ್ಥ್ಯ ಬಲವರ್ಧನೆ ಮಾಡಲಾಗಿರುತ್ತದೆ. ಹೀಗೆ ತರಬೇತಿ ಪಡೆದ ಕಿರು ಉದ್ದಿಮೆ ಸಮಾಲೋಚಕರುಗಳು ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆಗಳ ಅಭಿವೃದ್ದಿಗೆ ಪೂರಕ ಮಾಹಿತಿ, ಮಾರ್ಗದರ್ಶನ ಮತ್ತು ಸಹಕಾರ ಒದಗಿಸುತ್ತಿರುತ್ತಾರೆ. ಈ ಯೋಜನೆಯ ಅವಧಿಯು 3 ವರ್ಷವಾಗಿದ್ದು, ಕಾರ್ಯಕ್ರಮ ಅನುಷ್ಠಾನಕ್ಕಾಗಿ ರೂ.4.6 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ.

**ಕೋಷ್ಟಕ– 9 ಪ್ರಗತಿ ವರದಿ**

| ಕಾರ್ಯಕ್ರಮ ಅನುಷ್ಠಾನ ಪಾಲುದಾರರು | ಕಾರ್ಯಕ್ರಮ ಅನುಷ್ಠಾನ ಜಿಲ್ಲೆಗಳು | ಅಭಿವೃದ್ಧಿಪಡಿಸಲಾದ ಕಿರು ಉದ್ದಿಮೆ ಸಮಾಲೋಚಕರು | | ಆಯವ್ಯಯ ವಿವರ (ರೂ. ಲಕ್ಷಗಳಲ್ಲಿ) | | |
|---|---|---|---|---|---|---|
| | ಜಿಲ್ಲೆ | ಗುರಿ | ಪ್ರಗತಿ | ನಿಗದಿಪಡಿಸಿದ ಅನುದಾನ | ಮಂಜೂರಾದ ಅನುದಾನ | ಖರ್ಚು |
| ಕುಡುಂಬಶ್ರೀ | ಗದಗ, ಹಾಸನ ಮತ್ತು ಮೈಸೂರು | 6480 | 3520 | 250 | 224.28 | 224.28 |

ಕಾರ್ಯಕ್ರಮದ ಕಾರ್ಯತಂತ್ರವಾಗಿ ಮೊದಲಿಗೆ ಮೂರು ಅನುಷ್ಠಾನ ಜಿಲ್ಲೆಗಳಲ್ಲೂ ತಲಾ 45 ಎಮ್‌ಇಸಿಗಳನ್ನು ಗುರುತಿಸಿದ್ದು, ಒಟ್ಟು 135 ಎಮ್‌ಇಸಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿರುತ್ತದೆ. ಹೀಗೆ ಆಯ್ಕೆಯಾದ ಎಮ್‌ಇಸಿಗಳಿಗೆ ಮೂರು ದಿನದ ಅವಧಿಯ ಅಭಿಶಿಕ್ಷಣ ತರಬೇತಿಯನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಆ ಮೂಲಕ ಅವರವರ ಕೌಶಲ್ಯ ಮತ್ತು ಆಶಕ್ತಿಗನುಗುಣವಾಗಿ ಕ್ರೀಮ್ ಮತ್ತು ಸಾಮಾನ್ಯ ಎಮ್‌ಇಸಿಗಳೆಂದು ಎರಡು ವಿಧಾನಗಳನ್ನಾಗಿ ವಿಂಗಡಿಸಲಾಗಿರುತ್ತದೆ. ಇದರಂತೆ ಪ್ರತೀ ಜಿಲ್ಲೆಗಳಿಂದ 12 ರಂತೆ ಒಟ್ಟು 36 ಕ್ರೀಮ್ ಎಮ್‌ಇಸಿಗಳನ್ನು ಆಯ್ಕೆಮಾಡಿಕೊಳ್ಳಲಾಗಿರುತ್ತದೆ. ಕ್ರೀಮ್ ಎಮ್‌ಇಸಿಗಳಿಗೆ "ಗ್ರಾಮೀಣ ಉದ್ಯಮ ಮತ್ತು ಆಡಳಿತ ನಿರ್ವಹಣೆ ಅಧ್ಯಯನ" ಕುರಿತು 5 ದಿನಗಳ ಅವಧಿಯ ಆರು ತರಬೇತಿಗಳನ್ನು ಮೈಸೂರಿನ ಎಸ್‌ಐಆರ್‌ಡಿ ಸಂಸ್ಥೆಯಲ್ಲಿ ಆಯೋಜಿಸಲಾಗಿರುತ್ತದೆ. ಉಳಿದ ಸಾಮಾನ್ಯ ಎಮ್‌ಇಸಿಗಳಿಗೆ ಜಿಲ್ಲಾ ಮಟ್ಟದಲ್ಲಿ "ಕಿರು ಉಧ್ಯಮಗಳ ಅಭಿವೃದ್ದಿ ಮತ್ತು ಉದ್ದಿಮೆ ಹಾಗೂ ಆಡಳಿತ ನಿರ್ವಹಣೆ ಅಧ್ಯಯನ" ಕುರಿತು ತರಬೇತಿ ನೀಡಲಾಗಿರುತ್ತದೆ.

ಈ ರೀತಿಯಾಗಿ ಆಯ್ಕೆಗೊಂಡು ತರಬೇತಿ ಪಡೆದ ಎಮ್‌ಇಸಿಗಳು ತರಬೇತಿಯ ಜೊತೆಗೆ ಕ್ಷೇತ್ರ ಮಟ್ಟದಲ್ಲಿ ಕಿರು ಉದ್ದಿಮೆಗಳ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ ದೊರೆಯುವ ಸಂಪನ್ಮೂಲಗಳು ಮತ್ತು ಕಿರು ಉದ್ದಿಮೆಗಳನ್ನು ಸ್ಥಾಪಿಸಲು ಇರುವ ಬೇಡಿಕೆ ಕುರಿತು ಅಧ್ಯಯನ ನಡೆಸಿರುತ್ತಾರೆ. ಹೀಗೆ ಕ್ಷೇತ್ರ ಮಟ್ಟದ ಅಧ್ಯಯನ ಮತ್ತು ವಿಶ್ಲೇಷಣೆಗಾಗಿ ಅವಶ್ಯ ಮಾರ್ಗದರ್ಶನ ನೀಡಲು ಕುಡುಂಬಶ್ರೀ ಸಂಸ್ಥೆಯಿಂದ ಪ್ರತಿ ಜಿಲ್ಲೆಗೆ ಇಬ್ಬರು ಮೆಂಟರ್ ಎಮ್‌ಇಸಿಗಳನ್ನು ನೇಮೀಸಿರುತ್ತಾರೆ. ಈ ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಸೆಪ್ಟೆಂಬರ್ 2016ರಿಂದ ಅನುಷ್ಠಾನಗೊಳಿಸಲಾಗಿರುತ್ತದೆ.

ಕಾರ್ಯಕ್ರಮದ ಮಾರ್ಗಸೂಚಿಯಂತೆ ಮೊದಲಿಗೆ 187 ಕಿರು ಉದ್ದಿಮೆಗಳ ಸಮಾಲೋಚಕರನ್ನು ಗುರುತಿಸಿದ್ದು, ಅವರುಗಳಲ್ಲಿ ಆಶಕ್ತಿ ಹೊಂದಿರುವ ಮತ್ತು ಸೂಕ್ತ ಸಮಯ ಹಾಗೂ ಶ್ರಮವನ್ನು ವ್ಯಹಿಸಲು ಸಾಧ್ಯವಿರುವ 135 ಎಮ್‌ಇಸಿಗಳು ಅಂತಿಮವಾಗಿ ಕಾರ್ಯಕ್ರಮದಲ್ಲಿ ನೆಲೆಗೊಂಡಿರುತ್ತಾರೆ. ಹೀಗೆ ಎಮ್‌ಇಸಿಗಳಿಗೆ ಸ್ಥಳೀಯ ಮಟ್ಟದಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲವನ್ನು ನೀಡಲು ಪ್ರತಿ ಜಿಲ್ಲೆಗೆ ಇಬ್ಬರು ಮೆಂಟರ್ ಎಮ್‌ಇಸಿಗಳನ್ನು ಕುಡುಂಬಶ್ರೀ ಸಂಸ್ಥೆಯಿಂದ ನಿಯೋಜಿಸಲಾಗಿರುತ್ತದೆ.

ಮೂರು ಅನುಷ್ಠಾನ ಜಿಲ್ಲೆಗಳಲ್ಲಿ ಈವರೆಗೆ 2131 ಕಿರು ಉದ್ದಿಮೆಗಳನ್ನು ಸ್ಥಾಪಿಸಲಾಗಿದ್ದು, ಸಂಪೂರ್ಣವಾಗಿ ಫಲಾನುಭವಿಗಳ ಬಂಡವಾಳದಲ್ಲಿ ಪ್ರಾರಂಭಿಸಲಾಗಿರುತ್ತದೆ (ಈ ಬಂಡವಾಳವು ಸ್ವ ಸಹಾಯ ಗುಂಪಿನಿಂದ ಪಡೆದ ಮತ್ತು ಬ್ಯಾಂಕ್‌ನಿಂದ ಪಡೆದ ಸಾಲಗಳನ್ನು ಒಳಗೊಂಡಿರುತ್ತದೆ. ಸುಮಾರು 20 ವಲಯಗಳಲ್ಲಿ ಕಿರು ಉದ್ದಿಮೆಗಳನ್ನು

ಪ್ರಾರಂಭಿಸಲಾಗಿರುತ್ತದೆ. ಉದಾಹರಣೆಗೆ ಕೆಫೆ, ದಿನಸಿ ಅಂಗಡಿ, ಅಕ್ಕಿ ವ್ಯಾಪಾರ ಇತ್ಯಾದಿ. ಈವರೆಗೆ ಹೂಡಿಕೆ ಮಾಡಲಾಗಿರುವ ಬಂಡವಾಳದ ಮೊತ್ತ ಅಂದಾಜು ರೂ.876 ಲಕ್ಷಗಳಾಗಿದ್ದು, 2262 ಕಿರು ಉದ್ದಿಮೆದಾರರಿರುತ್ತಾರೆ.

**ಮೈಕ್ರೋ ಎಂಟರ್‌ಪ್ರೈಸಸ್ ಕನ್ಸಲ್ಟೆಂಟ್ ಕಾರ್ಯಕ್ರಮದ ಒಟ್ಟಾರೆ ಪ್ರಗತಿ:**

- 135 ಎನ್‌ಇಸಿಗಳು ಪ್ರತಿ ತಾಲ್ಲೂಕಿಗೆ ಸುಮಾರು 45 ರಂತೆ ಸ್ಥಳೀಯ ಮಟ್ಟದಲ್ಲಿ ಕಿರು ಉದ್ದಿಮೆಗಳ ರಚನೆ ಮತ್ತು ಅಭಿವೃದ್ಧಿಗೆ ಸೂಕ್ತ ಪ್ರೇರಣೆ, ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಿದ್ದು, ಈವರೆಗೆ ಒಟ್ಟು 3520 ಕಿರು ಉದ್ದಿಮೆಗಳನ್ನು ಸ್ಥಾಪಿಸಲಾಗಿರುತ್ತದೆ.
- ಹೀಗೆ ರಚನೆಗೊಂಡಿರುವ ಕಿರು ಉದ್ದಿಮೆಗಳು ಜಿಲ್ಲಾವಾರು ಹೀಗಿವೆ; ಗದಗ–1130, ಹಾಸನ–1203 ಮತ್ತು ಮೈಸೂರು 1187 ಆಗಿರುತ್ತವೆ.
- ಒಟ್ಟಾರೆ 2,250 ಕಿರು ಉದ್ದಿಮೆಗಳಲ್ಲಿ 2262 ಕಿರು ಉದ್ದಿಮೆದಾರರು ಜೀವನೋಪಾಯವನ್ನು ಕಂಡುಕೊಂಡಿರುತ್ತಾರೆ. ಕಿರು ಉದ್ದಿಮೆಗಳ ಪ್ರಾರಂಭಕ್ಕಾಗಿ ರೂ 816 ಲಕ್ಷಗಳನ್ನು ಬಂಡವಾಳವಾಗಿ ತೊಡಗಿಸಿದ್ದು, ಪ್ರತಿ ಕಿರು ಉದ್ದಿಮೆಗೆ ಸರಾಸರಿ ರೂ. 42,594/– ಗಳಾಗಿದೆ.
- ಗದಗ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿನ 18 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈವರೆಗೆ 19 ವಾರದ ಸಂತೆಗಳನ್ನು ಆಯೋಜಿಸಲಾಗಿರುತ್ತದೆ. ಇದರಲ್ಲಿ 610 ಕಿರು ಉದ್ದಿಮೆದಾರರು ಸಕ್ರಿಯವಾಗಿ ತೊಡಗಿಕೊಂಡಿದ್ದು, ತಾಜಾ ತರಕಾರಿಗಳು, ಗಾರ್ಮೆಂಟ್ಸ್/ ಬಟ್ಟೆಗಳು, ದಿನಸಿ, ಚಪ್ಪಲಿ, ಪಶು ಸಂಗೋಪನೆಗೆ ಸಂಬಂಧಿಸಿದ ಉಪಕರಣಗಳು ಇತ್ಯಾದಿಗಳನ್ನು ಮಾರಾಟ ಮಾಡಲಾಗುತ್ತಿರುತ್ತದೆ. ಪ್ರತಿ ವಾರವು ನಡೆಯುವ ಸಂತೆಯಲ್ಲಿ ಹಣಕಾಸು ವ್ಯವಹಾರವು ಕನಿಷ್ಠ ರೂ.25,000 ದಿಂದ ರೂ.2,00,000 ಗಳಾಗಿರುತ್ತದೆ.

**ದಿನಾಂಕ 17–26 ಫೆಬ್ರವರಿ 2018 ರಂದು ಫ್ರೀಡಂ ಪಾರ್ಕ, ಬೆಂಗಳೂರು ಇಲ್ಲಿ 2017–18 ನೇ ಸಾಲಿನ ರಾಷ್ಟ್ರ ಮಟ್ಟದ "ಸಂಜೀವಿನಿ ಸರಸ್ ಮೇಳ –2018" ಹಮ್ಮಿಕೊಂಡಿರುವ ಕುರಿತು.**

ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ಎನ್‌ಆರ್‌ಎಲ್‌ಎಂ ಯೋಜನೆಯಡಿ ಗ್ರಾಮೀಣ ಪ್ರದೇಶದ ಮಹಿಳಾ ಸ್ವ ಸಹಾಯ ಗುಂಪುಗಳ ಸಾಮರ್ಥ್ಯವೃದ್ಧಿಗಾಗಿ ಮತ್ತು ಜೀವನೋಪಾಯಕ್ಕಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಕೇಂದ್ರ ಸರ್ಕಾರ, ನವದೆಹಲಿ ಇವರ ಮಾರ್ಗಸೂಚಿಯಂತೆ ರಾಷ್ಟ್ರ ಮಟ್ಟದ ಸರಸ್ ಮೇಳವನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ, ಜಿಲ್ಲೆಗಳಲ್ಲಿ ಗ್ರಾಮೀಣ ಪ್ರದೇಶದ ಮಹಿಳಾ ಸಬಲೀಕರಣಕ್ಕಾಗಿ ಸ್ವ ಸಹಾಯ ಗುಂಪುಗಳು ತಯಾರಿಸುವ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲು ಅವಕಾಶ ಕಲ್ಪಿಸುತ್ತಿದೆ.

ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ವತಿಯಿಂದ ದಿನಾಂಕ 17–02–2018 ರಿಂದ 26–02–2018 ರವರೆಗೆ, ಬೆಂಗಳೂರಿನ ಗಾಂಧಿನಗರದಲ್ಲಿರುವ "ಸ್ವಾತಂತ್ರ್ಯ ಉದ್ಯಾನವನದಲ್ಲಿ ರಾಷ್ಟ್ರ ಮಟ್ಟದ ಪ್ರಥಮ ಸಂಜೀವಿನಿ –ಸರಸ್ ಮೇಳವನ್ನು ಆಯೋಜಿಸಲಾಗಿದೆ. ಈ ಮೇಳದಲ್ಲಿ 28 ರಾಜ್ಯಗಳು ಮತ್ತು 05 ಕೇಂದ್ರಾಡಳಿತ ಪ್ರದೇಶಗಳಿಂದ ಹಾಗೂ ರಾಜ್ಯದ 30 ಜಿಲ್ಲೆಗಳಿಂದ ಗ್ರಾಮೀಣ ಪ್ರದೇಶದ ಮಹಿಳಾ ಸ್ವ ಸಹಾಯ ಗುಂಪುಗಳು ಉತ್ಪಾದಿಸುವ ಗುಡಿ ಕೈಗಾರಿಕೆ / ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಭಾಗವಹಿಸಿದ್ದರು.

ಕೇಂದ್ರ ಗ್ರಾಮಿಣಾಭಿವೃದ್ಧಿ ಮಂತ್ರಾಲಯವು ಪ್ರಸಕ್ತ ವರ್ಷ ರಾಜ್ಯಕ್ಕೆ ಈ ಮೇಳವನ್ನು ಆಯೋಜಿಸಲು ರೂ.40.00 ಲಕ್ಷಗಳನ್ನು ನಿಗದಿಪಡಿಸಿದೆ. ವಿವಿಧ ಕೌಶಲ್ಯಗಳ ಕಲಿಕೆ ಮತ್ತು ಗ್ರಾಮೀಣ ಪ್ರದೇಶದ ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶಿಸಲು, ಮಾರಾಟ ಮಾಡಲು ಸುಮಾರು 200–225 ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ನಬಾರ್ಡ, ಎನ್‌ಯುಎಲ್‌ಎಂ, ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಲ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಒಡಿಸಾ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಹಾಗೂ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಹಿಳಾ ಸ್ವಸಹಾಯ ಗುಂಪುಗಳ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ತಮಿಳುನಾಡಿನ ಬೇವಿನ ಮರದ ಕಟ್ಟಿಗೆಯಿಂದ ತಯಾರಿಸಿದ

ವಸ್ತುಗಳು, ಚೆನ್ನಪಟ್ಟಣದ ಬೊಂಬೆಗಳು, ಗೋವಾ ರಾಜ್ಯದ ಶುಷ್ಕ ಹೂವುಗಳು, ಮುಂತಾದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಲ್ಪಿಸಲಾಗಿತ್ತು.

ಗ್ರಾಮೀಣ ಪ್ರದೇಶದ ಮಹಿಳಾ ಸ್ವ ಸಹಾಯ ಗುಂಪುಗಳು, ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳನ್ನು ಉತ್ತೇಜಿಸುವುದು ಮತ್ತು ಮಾರುಕಟ್ಟೆ ಸೌಲಭ್ಯ ಮತ್ತು ಮಾರಾಟ ಕಲ್ಪಿಸುವುದೇ ಈ ಮೇಳದ ಮುಖ್ಯ ಉದ್ದೇಶವಾಗಿದೆ.

**ಮುಖ್ಯ ಅಂಶಗಳು:**

- ವಿವಿಧ ರಾಜ್ಯಗಳಿಂದ ಒಟ್ಟು 12 ರಾಜ್ಯಗಳು ಮತ್ತು ಗೋವಾ ರಾಜ್ಯಗಳಿಂದ ಮತ್ತು 70 ಸ್ವ ಸಹಾಯ ಗುಂಪುಗಳು ಮತ್ತು ಗ್ರಾಮೀಣ ಕುಶಲಕರ್ಮಿಗಳು ಭಾಗವಿಸಿದ್ದರು.
- ಒಟ್ಟು 2013 ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 500 ಕ್ಕೂ ಹೆಚ್ಚು ವೈವಿದ್ಯಮಯ ಉತ್ಪನ್ನಗಳನ್ನು ಪ್ರದರ್ಶಿಸಲು ಮತ್ತು ಮಾರಾಟ ಮಾಡಲು ಸ್ವಸಹಾಯ ಗುಂಪುಗಳಿಗೆ ಮತ್ತು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಅನುಕೂಲವಾಗುವಂತೆ ಈ ಮೇಳವನ್ನು ಹಮ್ಮಿಕೊಳ್ಳಲಾಗಿತ್ತು.
- ಎಲ್ಲಾ ಮಳಿಗೆಗಳನ್ನು ಸ್ವಸಹಾಯ ಗುಂಪುಗಳಿಗೆ ಮತ್ತು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಉಚಿತವಾಗಿ ನೀಡಲಾಗಿತ್ತು.
- ಬೇರೆ ರಾಜ್ಯಗಳಿಂದ ಮತ್ತು ರಾಜ್ಯದ 30 ಜಿಲ್ಲೆಗಳಿಂದ ಬಂದಂತಹ ಸ್ವಸಹಾಯ ಗುಂಪುಗಳ ಸದಸ್ಯರಿಗೆ ಮತ್ತು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ ಉಚಿತವಾಗಿ ವಸತಿ ಸೌಲಭ್ಯಗಳನ್ನು ಒದಗಿಸಲಾಗಿತ್ತು.
- ವಿವಿಧ ಮಾದ್ಯಮಗಳ ಮೂಲಕ ಮುದ್ರಣ, ವಿದ್ಯುನ್ಮಾನ ಮುಂತಾದವುಗಳ ಮೂಲಕ ವ್ಯಾಪಕ ಪ್ರಚಾರ ಮಾಡಿರುವುದರಿಂದ ಸದರಿ ಸರಸ್ ಮೇಳಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಜನರು ಭೇಟಿ ನೀಡಿ, ಯಶಸ್ವಿಗೊಳಿಸಲಾಗಿದ್ದು, ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳು ಮತ್ತು ಮಹಿಳಾ ಸ್ವಸಹಾಯಗುಂಪುಗಳ ಸದಸ್ಯರು ಉತ್ತಮವಾಗಿ ವ್ಯವಹಾರವನ್ನು ಮಾಡಿರುತ್ತಾರೆ.
- ಎಲ್ಲಾ ಸ್ವಸಹಾಯ ಗುಂಪುಗಳು, ಗ್ರಾಮೀಣ ಪ್ರದೇಶದ ಕುಸಲಕರ್ಮಿಗಳು ಉತ್ಪಾದಿಸಿದ ಉತ್ಪನ್ನಗಳ ಒಟ್ಟು ಮಾರಾಟ ರೂ.100/- ಲಕ್ಷ ಎಂದು ಅಂದಾಜಿಸಲಾಗಿದೆ.
- ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಸಹಯೋಗದೊಂದಿಗೆ ಸಂಗೀತ, ನಾಟಕ ಮತ್ತು ನೃತ್ಯ ಕ್ಷೇತ್ರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿ ದಿನ ಸಂಜೆ:6.30 ರಿಂದ ರಾತ್ರಿ 9.30 ರವರೆಗೆ ಆಯೋಜಿಸಲಾಗಿತ್ತು.

***ಸರಸ್ ಮೇಳ –2018 ರಲ್ಲಿ ಭಾಗವಹಿಸಿದ ಎಲ್ಲಾ ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಏರ್ಪಡಿಸಿದ ಮೇಳ ಕುರಿತು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ ಮತ್ತು ಯಶಸ್ಸನ್ನು ಕಂಡಿರುತ್ತಾರೆ.***

## ಹಣಕಾಸು ಸೇರ್ಪಡೆ:

ಹಣಕಾಸು ಸೇರ್ಪಡೆ ಪ್ರಕ್ರಿಯೆಯು ಬಡ ಜನರಿಗೆ ಹಣಕಾಸು ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡುವುದಾಗಿರುತ್ತದೆ. ಕೆಎಸ್‌ಆರ್‌ಎಲ್‌ಪಿಎಸ್ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳು ಸುಲಭ ಮಾರ್ಗದ ಮೂಲಕ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ವ್ಯವಸ್ಥಿತ ಹಣಕಾಸು ಸಂಸ್ಥೆಗಳಿಂದ ಪಡೆಯುವಂತೆ ಮಾಡುವುದಾಗಿರುತ್ತದೆ.

ಬ್ಯಾಂಕ್‌ಗಳು ಬಡಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವನ್ನು ನೀಡಲು ಶ್ರಮಿಸುತ್ತಿದ್ದರೂ ಸಹ, ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಭಾಗದ ಎಲ್ಲಾ ವರ್ಗದ ಬಡಜನರನ್ನು ತಲುಪುವುದು ಕಷ್ಟವಾಗಿರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಅರ್ಹ ಜನತೆಗೆ ಹಣಕಾಸು ಸೌಲಭ್ಯ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಬ್ಯಾಂಕ್ ನಂತಹ ಹಣಕಾಸು ಸಂಸ್ಥೆಗಳು ಅತ್ಯಂತ ಹಿಂದುಳಿದ ಸೌಲಭ್ಯ ರಹಿತ ಗ್ರಾಮಗಳನ್ನು ತಲುಪಲು ದುಸ್ತರವಾಗಿದೆ.

ಈ ಕಾರಣದಿಂದಾಗಿ ಕೆಎಸ್ಆರ್ಎಲ್ಪಿಎಸ್ ಸಂಸ್ಥೆಯು ಹಣಕಾಸು ಸೇವೆಯನ್ನು ಬಡಜನರಿಗೆ ಒದಗಿಸಲು ಮತ್ತು ಅವರನ್ನು ಬಡತನದ ಪರಿಸ್ಥಿತಿಯಿಂದ ಹೊರತಂದು ಶಾಶ್ವತ ಅಭಿವೃದ್ಧಿ ಸಾಧಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ಸೌಕರ್ಯ ಒದಗಿಸುವ ಕಾರ್ಯಕ್ರಮದ ಮುಖ್ಯ ಉದ್ದೇಶವು ಅದೇ ಆಗಿದ್ದು, 2017–18ನೇ ಸಾಲಿನಲ್ಲಿ 443393 ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ರೂ.6917.49 ಕೋಟಿ ಸಾಲ ಸೌಲಭ್ಯ ಒದಗಿಸಿದೆ.

**ಹಣಕಾಸು ಸೇರ್ಪಡೆ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡಿರುವ ಕಾರ್ಯತಂತ್ರಗಳು:**

**ರಾಜ್ಯ ಮಟ್ಟದಲ್ಲಿ ಸ್ವಸಹಾಯ ಗುಂಪುಗಳ ಸಂಬಂಧ ಕ್ರಿಯಾಶೀಲ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆ ನಡೆಸುವುದು:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಿಗದಿಪಡಿಸಿರುವಂತೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಭೆಯನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಅಗತ್ಯ ಸಂದರ್ಭಗಳಲ್ಲಿ ಹೆಚ್ಚುವರಿ ಸಭೆಗಳನ್ನು ಸಹ ನಡೆಸಲಾಗುವುದು. ಇದರಿಂದಾಗಿ ಸಮಿತಿಯ ಸದಸ್ಯರುಗಳು ಹೆಚ್ಚಿನ ಮಾಹಿತಿಯೊಂದಿಗೆ ಬ್ಯಾಂಕ್‌ಗಳು ನಿಗದಿತ ಗುರಿಯನ್ನು ಸಾಧಿಸಲು ಸಹಕಾರ ನೀಡಬಹುದಾಗಿದೆ. ಬ್ಯಾಂಕ್‌ಗಳ ಕಾರ್ಯ ಪ್ರವೃತ್ತಿ ಮತ್ತು ಗುಣಮಟ್ಟವನ್ನು ಅಳೆಯಲು, ಪ್ರಗತಿ ಪರಿಶೀಲನೆ ನಡೆಸಿ ಅವಶ್ಯ ಕಾರ್ಯತಂತ್ರ ರೂಪಿಸಲು ಅಳವಡಿಸಿಕೊಳ್ಳಲು ಎಸ್ಎಲ್‌ಬಿಸಿ ಉತ್ತಮ ವೇದಿಕೆಯಾಗಿದೆ.

**ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆ:**

ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆಯನ್ನು ಮತ್ತು ಎಸ್‌ಸಿ/ಎಸ್‌ಟಿ ಎಸ್‌ಹೆಚ್‌ಜಿ ಬ್ಯಾಂಕ್ ಸಾಲ ಸಂಪರ್ಕ ಮಾಸಾಚರಣೆಯನ್ನು ನಡೆಸಲಾಗಿದ್ದು, ಬ್ಯಾಂಕ್ ಲಿಂಕೇಜ್ ಹೆಚ್ಚಿಸಲು ಉದ್ದೇಶಿಸಿರುವ ಮಾಸಾಚರಣೆಗೆ, ಅಗತ್ಯ ಸಹಕಾರ ನೀಡುವಂತೆ ಕೋರಿರುತ್ತಾರೆ. ಈ ನಿಟ್ಟಿನಲ್ಲಿ ಬ್ಯಾಂಕ್‌ಗಳು ಉತ್ತಮ ಸಹಕಾರ ನೀಡಿರುತ್ತವೆ. ಈ ಮಾಸಗಳಲ್ಲಿ ಬ್ಯಾಂಕ್‌ಗಳು ಸ್ವ ಸಹಾಯ ಗುಂಪಿನ ಸದಸ್ಯರಿಗೆ ಹೆಚ್ಚಿನ ಮಟ್ಟದಲ್ಲಿ ಸಾಲ ಸಂಪರ್ಕ ಕಲ್ಪಿಸಲಾಗಿರುತ್ತದೆ.

**ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಬ್ಯಾಂಕರ್ಸ್ ಸಮಿತಿ ಸಭೆಯ ರಚನೆ:**

ಜಿಲ್ಲಾ ಮಟ್ಟದಲ್ಲಿ **'ಜಿಲ್ಲಾ ಮಟ್ಟದ ಸಾಲ ಸಮಿತಿ'** ಮತ್ತು ತಾಲ್ಲೂಕು ಮಟ್ಟದಲ್ಲಿ **'ತಾಲ್ಲೂಕು ಮಟ್ಟದ ಬ್ಯಾಂಕರ್ಸ್ ಸಮಿತಿ ಸಭೆ'** ಗಳನ್ನು ನಡೆಸುವುದರ ಮೂಲಕ, ಬ್ಯಾಂಕ್ ಸಾಲ ನೀಡಿಕೆ, ಮರುಪಾವತಿಯಲ್ಲಿನ ತೊಡಕುಗಳನ್ನು ಕುರಿತು ಮಾಹಿತಿಯನ್ನು ನಿಯಮಿತವಾಗಿ ವಿನಿಮಯ ಮಾಡಿಕೊಂಡು ಉತ್ತಮ ಪ್ರಗತಿ ಸಾಧಿಸಲು ಸಾಧ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದಲ್ಲಿ ಡಿಸಿಸಿ/ಡಿಎಲ್ಆರ್‌ಸಿ/ ಮತ್ತು ಬಿಎಲ್‌ಬಿಸಿ ಗಳಿಗೆ ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ನೀಡಿಕೆ ಕುರಿತು ಮಾಸಿಕ ಸಭೆಗಳನ್ನು ನಡೆಸುವಂತೆ ನಿರ್ದೇಶಿಸಲಾಯಿತು. ಅಲ್ಲದೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಸಹಯೋಗದೊಂದಿಗೆ ತಿಂಗಳಲ್ಲಿ ಒಂದು ದಿನ ಬ್ಯಾಂಕ್ ಸಾಲ ಮರುಪಾವತಿ ದಿನವನ್ನು ಆಚರಿಸಲು ಆದೇಶ ನೀಡಲಾಯಿತು. ಈ ಮೂಲಕ ನಿಯಮಿತವಾಗಿ ಸಾಲ ಮರುಪಾವತಿ ಮಾಡದಿರುವ ಸ್ವ ಸಹಾಯ ಗುಂಪುಗಳ ಸಾಲ ಮರುಪಾವತಿಯನ್ನು ನಿಯಮಿತವಾಗಿ ಮಾಡಿದಂತಾಗುತ್ತದೆ.

**ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ಸ್ ಸಭೆ:**

ರಾಜ್ಯ ಮಟ್ಟದಲ್ಲಿ ಎಲ್‌ಡಿಎಮ್ಸ್‌ಗಳ ಸಭೆಯನ್ನು ನಡೆಸಲಾಗಿದ್ದು, ನಿಯಮಿತವಾಗಿ ಜಿಲ್ಲಾ ಮಟ್ಟದಲ್ಲಿ ಡಿಎಲ್‌ಬಿಸಿ ಮತ್ತು ತಾಲ್ಲೂಕು ಮಟ್ಟದಲ್ಲಿ ಬಿಎಲ್‌ಬಿಸಿ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ಮತ್ತು ಬಡ್ಡಿ ಸಹಾಯ ಧನ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಅವರುಗಳ ಭಾಗವಹಿಸುವಿಕೆ ಕುರಿತು ಚರ್ಚಿಸಲಾಗಿರುತ್ತದೆ. ಎಸ್‌ಎಚ್‌ಜಿ ಬ್ಯಾಂಕ್ ಲಿಕೇಂಜ್‌ನಲ್ಲಿ ಗುರಿಯನ್ನು ಸಾಧಿಸಲು ಅವರುಗಳ ಕಾರ್ಯ ಮತ್ತು ಪ್ರಗತಿಯನ್ನು ಪಟ್ಟಿ ಮಾಡಿ ನೀಡಲಾಗಿರುತ್ತದೆ.

**ಸರ್ಕಾರೇತರ ಸಂಸ್ಥೆಗಳೊಂದಿಗೆ ಸಭೆ ನಡೆಸುವುದು:**

ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ಮತ್ತು ಬಡ್ಡಿ ಸಹಾಯಧನ ಸೌಲಭ್ಯದ ಕುರಿತಾದ ಗುರಿ ಸಾಧನೆಯಲ್ಲಿ ಎನ್‌ಜಿಓಗಳ ಸಹಕಾರ ಕುರಿತು ಎರಡು ಸಭೆಗಳನ್ನು ನಡೆಸಲಾಗಿರುತ್ತದೆ. ಮುಂದುವರೆದು, ಎನ್‌ಜಿಓ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಎಸ್‌ಕೆಡಿಆರ್‌ಡಿಪಿ ಸಂಸ್ಥೆಯೊಂದಿಗೆ ಮೂರು ಸಭೆಗಳನ್ನು ನಡೆಸಲಾಗಿರುತ್ತದೆ. ಈ ಸಭೆಗಳಲ್ಲಿ, ಕ್ಷೇತ್ರಮಟ್ಟದಲ್ಲಿ ಸ್ವಸಹಾಯ ಗುಂಪುಗಳ ರಚನೆ, ಬ್ಯಾಂಕ್ ಸಂಪರ್ಕ ಮತ್ತು ಬಡ್ಡಿ ಸಹಾಯಧನ ಸೌಲಭ್ಯಗಳ ಯಶಸ್ವಿ ಅನುಷ್ಠಾನ ಕುರಿತು ಚರ್ಚಿಸಲಾಗಿರುತ್ತದೆ. ಎನ್‌ಜಿಓಗಳು ಮತ್ತು ಎಸ್‌ಕೆಡಿಆರ್‌ಡಿಪಿ ಸಂಸ್ಥೆಗಳು ಎಸ್‌ಎಚ್‌ಜಿ ಬ್ಯಾಂಕ್ ಲಿಂಕೇಜ್ ರಂಗದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿವೆ. ಎಸ್‌ಕೆಡಿಆರ್‌ಡಿಪಿ ಸಂಸ್ಥೆಯು ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್‌ಗಳಿಂದಲೇ ನೇರವಾಗಿ ಸಾಲ ಒದಗಿಸುವ ಪ್ರಕ್ರಿಯೆಗೆ ಚಾಲನೆ ನೀಡುತ್ತಿದೆ. ಇದರಿಂದಾಗಿ ಆ ಸ್ವಸಹಾಯ ಗುಂಪುಗಳಿಗೆ ಬಡ್ಡಿ ಸಹಾಯಧನ ಸೌಲಭ್ಯವು ದೊರೆತಂತಾಗಿದೆ.

**ಖಾಸಗಿ ಬ್ಯಾಂಕ್‌ಗಳೊಂದಿಗಿನ ಸಭೆ:**

ಖಾಸಗಿ ಬ್ಯಾಂಕ್‌ಗಳೊಂದಿಗೆ ಒಂದು ಸಭೆಯನ್ನು ನಡೆಸಲಾಗಿದ್ದು, ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಂಪರ್ಕ ಕಲ್ಪಿಸಲು ಮತ್ತು ಬಡ್ಡಿ ಸಹಾಯಧನ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಸಹಕಾರ ಕೋರಲಾಗಿರುತ್ತದೆ.

**ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್):**

ಸಂಜೀವಿನಿಯು ಒಕ್ಕೂಟಗಳಿಗೆ ಸಮುದಾಯ ಬಂಡವಾಳ ನಿಧಿ ಅನುದಾನವನ್ನು ನೀಡುತ್ತಿದ್ದು, ಇದು ಒಕ್ಕೂಟಗಳ ಸದಸ್ಯರು ತಯಾರಿಸುವ ಕಿರು ಬಂಡವಾಳ ಹೂಡಿಕೆ ಯೋಜನೆಯನ್ನು ಆಧರಿಸಿದೆ. ಹೀಗೆ ನೀಡಲಾಗುವ ಸಮುದಾಯ ಬಂಡವಾಳ ನಿಧಿಯನ್ನು ಒಕ್ಕೂಟಗಳು ಸ್ವ ಸಹಾಯ ಸಂಘಗಳಿಗೆ ಸಾಲ ರೂಪದಲ್ಲಿ ನೀಡುತ್ತವೆ. ಸ್ವ ಸಹಾಯ ಗಂಪುಗಳು ಸದಸ್ಯರಿಗೆ ಸಾಲ ನೀಡುತ್ತವೆ. ಈ ರೀತಿ ಪಡೆದ ಸಾಲವನ್ನು ಸ್ವ ಸಹಾಯ ಗುಂಪಿನ ಸದಸ್ಯರು ಸ್ವ/ಕುಟುಂಬದ ಪೋಷಣೆ ಮತ್ತು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ತೊಡಗಿಸಿಕೊಳ್ಳುವರು. ರಾಜ್ಯದಲ್ಲಿ ಮೊದಲ ಬಾರಿಗೆ ವಾರ್ಡ್/ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳು ಮತ್ತು ಸಮುದಾಯ ಬಂಡವಾಳ ನಿಧಿ(ಸಿ.ಐ.ಎಫ್) ಕಲ್ಪನೆಯನ್ನು ಸಂಜೀವಿನಿ ಸಂಸ್ಥೆಯು ಪರಿಚಯಿಸಿದೆ.

**ಕೋಷ್ಟಕ–10 2017–18ನೇ ಸಾಲಿನಲ್ಲಿ ಹಣಕಾಸು ಸೇರ್ಪಡೆಯ ಪ್ರಗತಿ ವಿವರ**

| ಘಟಕ | (ರೂ. ಲಕ್ಷಗಳಲ್ಲಿ) | | | |
|---|---|---|---|---|
| | ಗುರಿ | | ಸಾಧನೆ | |
| | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| ಸಮುದಾಯ ಬಂಡವಾಳ ನಿಧಿ | 5410 | 5410 | 3800 | 3847.50 |
| ಸ್ವಸಹಾಯ ಸಂಘಗಳಿಗೆ ಬ್ಯಾಂಕ್ ಲಿಂಕೇಜ್ (ವಿತರಣೆ) | 281320 | 370161 | 443393 | 691749.00 |
| ಸ್ವಸಹಾಯ ಸಂಘಗಳಿಗೆ ಬ್ಯಾಂಕ್ ಲಿಂಕೇಜ್ (ಬಾಕಿ ಉಳಿದಿರುವ) | 593522 | 754812 | 611646 | 105802.00 |

## ಹಣಕಾಸು ವಿಭಾಗ:

**ಕೋಷ್ಟಕ 11 2017–18 ನೇ ಸಾಲಿನ ಯೋಜನಾವಾರು ಬಿಡುಗಡೆ ಮತ್ತು ವೆಚ್ಚ**

(ರೂ.ಲಕ್ಷಗಳಲ್ಲಿ)

| | | |
|---|---|---|
| **2017–18** | ಆಡಳಿತ ವೆಚ್ಚ | **1543.88** |
| | ಕ್ಷೇತ್ರ ಭೇಟಿ | **32.75** |
| | ಇತರೆ ವೆಚ್ಚ | **20820.95** |
| | **2017–18 ಒಟ್ಟು ವೆಚ್ಚ** | **22397.61** |

(ರೂ.ಲಕ್ಷಗಳಲ್ಲಿ)

| ವರ್ಷ | ವಿವರ | ಎನ್ ಆರ್ ಎಲ್ ಪಿ | ಎನ್ ಆರ್ ಎಲ್ ಎಂ | ಎಂಕೆಎಸ್ ಪಿ | ಬಡ್ಡಿ ಸಹಾಯ ಧನ (ಕೇಂದ್ರ) | ಬಡ್ಡಿ ಸಹಾಯ ಧನ (ರಾಜ್ಯ) | ಆರ್ ಸೆಟಿ | ಆಜೀವಿಕಾ ಕೌಶಲ್ಯ | ಆರ್‌ಜಿಸಿವೈ | ರೂರ್ಬನ್ ಮಿಷನ್ | ಒಟ್ಟು |
|---|---|---|---|---|---|---|---|---|---|---|---|
| **2017-18** | ಆಡಳಿತ ವೆಚ್ಚ | 972.52 | 464.41 | - | - | - | - | 29.60 | - | 77.35 | **1543.88** |
| | ಕ್ಷೇತ್ರ ಭೇಟಿ | 24.36 | 8.39 | - | - | - | - | - | - | - | **32.75** |
| | ಇತರೆ ವೆಚ್ಚ | 344.05 | 5022.27 | 160.44 | 2021.00 | - | 508.00 | 7713.94 | 2801.25 | 2250.00 | **20820.95** |
| | ಒಟ್ಟು ವೆಚ್ಚ | **1340.95** | **5495.08** | **160.44** | **2021.00** | **-** | **508.00** | **7743.54** | **2801.25** | **2327.35** | **22397.61** |

**ರಾಜೀವ್ ಗಾಂಧಿ ಚೈತನ್ಯ ಯೋಜನೆ:**

ರಾಜೀವ್ ಗಾಂಧಿ ಚೈತನ್ಯ ಯೋಜನೆಯು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, 2013–14ನೇ ಸಾಲಿನಿಂದ ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿದೆ. 2014–15 ನೇ ಸಾಲಿನಲ್ಲಿ 18 ರಿಂದ 35 ವರ್ಷದ ವರೆಗಿನ 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುವ ನಿರುದ್ಯೋಗಿ ಯುವ ಜನರನ್ನು ಪ್ರತಿ ಗ್ರಾಮ ಪಂಚಾಯತಿಗೆ 40 ರಂತೆ ರಾಜ್ಯದಲ್ಲಿ ಒಟ್ಟು 2 ಲಕ್ಷ ಯುವ ಜನರನ್ನು ಆಯ್ಕೆ ಮಾಡಲು ಉದ್ದೇಶಿಸಲಾಗಿತ್ತು. ಅದರಲ್ಲಿ 1 ಲಕ್ಷ ಗ್ರಾಮೀಣ ನಿರುದ್ಯೋಗಿ ಯುವಜನತೆಗೆ ಸ್ವ–ಉದ್ಯೋಗ ಹಾಗೂ 1 ಲಕ್ಷ ನಿರುದ್ಯೋಗಿ ಯುವಜನತೆಗೆ ವೃತ್ತಿಪರ ಕೌಶಲ್ಯದೊಂದಿಗೆ ಉದ್ಯೋಗ ಕಲ್ಪಿಸುವ ಗುರಿ ಹೊಂದಲಾಗಿತ್ತು.

ಅಭ್ಯರ್ಥಿಗಳ ಆಯ್ಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮಾವಳಿಗಳಂತೆ ಕನಿಷ್ಠ ಶೇ.20% ಪರಿಶಿಷ್ಠ ಜಾತಿ ಹಾಗು ಶೇ.9% ಪರಿಶಿಷ್ಠ ಪಂಗಡದ ಯುವಜನರನ್ನು ಆಯ್ಕೆ ಮಾಡಿಕೊಳ್ಳುವುದು, ಮಹಿಳೆಯರಿಗೆ ಮತ್ತು ಅಲ್ಪಸಂಖ್ಯಾತರಿಗೆ ಆಧ್ಯತೆ ನೀಡಲಾಗುವುದು ಹಾಗೂ ವಿಕಲಚೇತನರು, ಬುಡಕಟ್ಟು ಜನಾಂಗದ ಯುವ ಜನರು, ಲೈಂಗಿಕ ಶೋಷಣೆಗೊಳಗಾದ ಮಹಿಳೆಯರು, ವಿಧವೆಯರು, ಪರಿತ್ಯಕ್ತ ಮಹಿಳೆಯರು, ಮಂಗಳಮುಖಿಯರು (ಟ್ರಾನ್ಸ್‌ಜೆಂಡರ್), ಬಿಡುಗಡೆಗೊಂಡ ಎಲ್ಲಾ ಜೀತ ವಿಮುಕ್ತರು, ಎಂಜಿಎನ್‌ಆರ್‌ಇಜಿಎ ಯಡಿ 100 ದಿನ ಉದ್ಯೋಗ ಪೂರೈಸಿದ ಯುವ ಜನರು ಇವರುಗಳನ್ನು ಸ್ವಯಂ ಸೇರ್ಪಡೆ (ಂಣಾಣಠ ಎಟಿಭಿಟಣಾಂಟಿ) ಹೊಂದುವುದು. ಇವರಿಗೆ ಗ್ರಾಮ ಸಭೆಯ ಆಯ್ಕೆ ಕಡ್ಡಾಯವಾಗಿರುವುದಿಲ್ಲ.

2015–16 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, 2016–17 ನೇ ಸಾಲಿನಲ್ಲಿ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸುವಿಕೆಗಾಗಿ ಪ್ರತಿ ಗ್ರಾಮ ಪಂಚಾಯತಿಯಿಂದ 50 ರಂತೆ (25+25) ಯುವಕ/ಯುವತಿಯರನ್ನು ಆಯ್ಕೆ ಮಾಡಲು ಗುರಿ ನಿಗದಿಪಡಿಸಲಾಗಿದೆ.

ಅದರಂತೆ 2017–18ನೇ ಸಾಲಿಗೆ ಒಟ್ಟು ಗುರಿ 35,100 ಆಗಿದ್ದು, ಮಾರ್ಚ್ 2017ರ ಮಾಹೆಯ ಅಂತ್ಯಕ್ಕೆ 101714 ಅಭ್ಯರ್ಥಿಗಳ ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ವಿವಿಧ ಬ್ಯಾಂಕುಗಳಿಗೆ ಸಲ್ಲಿಸಲಾಗಿದ್ದು, ಅದರಲ್ಲಿ 25210 ಫಲಾನುಭವಿಗಳಿಗೆ ಸಾಲ ಮಂಜೂರಾಗಿದ್ದು ಉದ್ಯಮಶೀಲತಾ ತರಬೇತಿ ಪಡೆದಿರುತ್ತಾರೆ. ಕೌಶಲ್ಯಾಭಿವೃದ್ಧಿ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸುವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ 3558 ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲಾಗಿದ್ದು ಅದರಲ್ಲಿ 1622 ಅಭ್ಯರ್ಥಿಗಳಿಗೆ ಉದ್ಯೋಗ ಒದಗಿಸಲಾಗಿದೆ.

ಆಯ್ಕೆಯಾದ ಫಲಾನುಭವಿಗಳಿಗೆ ಸ್ವ–ಉದ್ಯೋಗ ಮತ್ತು ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲಾಗುತ್ತದೆ. ಸ್ವ–ಉದ್ಯೋಗ ಕಾರ್ಯಕ್ರಮ ಅನುಷ್ಠಾನಗೊಳಿಸಲು 30 ಜಿಲ್ಲೆಗಳಲ್ಲಿ ಯೋಜನಾ ಬೆಂಬಲ ಸಂಸ್ಥೆಗಳು ಮತ್ತು ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗ ಕಲ್ಪಿಸಲು ಯೋಜನಾ ಅನುಷ್ಠಾನ ಸಂಸ್ಥೆಗಳ ಸೇವೆ ಪಡೆಯಲಾಗಿದ್ದು, ಪ್ರಸ್ತುತ 41 ಯೋಜನಾ ಬೆಂಬಲ ಸಂಸ್ಥೆಗಳು ಮತ್ತು 11 ಯೋಜನಾ ಅನುಷ್ಠಾನ ಸಂಸ್ಥೆಗಳು ರಾಜೀವ್ ಗಾಂಧಿ ಚೈತನ್ಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ. ಸ್ವ–ಉದ್ಯೋಗ ಆಯ್ಕೆ ಮಾಡಿಕೊಂಡಿರುವ ಫಲಾನುಭವಿಗಳಿಗೆ ಮಾರ್ಗದರ್ಶನ ನೀಡಲು ಅನುವಾಗುವಂತೆ ಯೋಜನಾ ಬೆಂಬಲ ಸಂಸ್ಥೆಯ ಪ್ರತಿನಿಧಿಗೆ ಯೋಜನೆಯ ಗುರಿ, ಉದ್ದೇಶಗಳು ಮತ್ತು ಅನುಷ್ಠಾನದ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ, ತರಬೇತಿ ಪಡೆದ ಪ್ರತಿನಿಧಿ ಮಾಸ್ಟರ್ ಟ್ರೈನರ್ ಆಗಿ ಕಾರ್ಯನಿರ್ವಹಿಸಿ ಕ್ಷೇತ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುತ್ತಾರೆ.

ಸಮುದಾಯ ಸಂಪನ್ಮೂಲ ವ್ಯಕ್ತಿಗಳು ಜಂಟಿ ಬಾಧ್ಯತಾ ಗುಂಪುಗಳನ್ನು (ಜೆಎಲ್‌ಜಿ) ರಚಿಸಿ ಅವುಗಳ ಯೋಜನಾ ವರದಿಯನ್ನು ತಯಾರಿಸಿ ಅವಶ್ಯವಿರುವ ಎಲ್ಲಾ ದಾಖಲೆಗಳೊಂದಿಗೆ ಸಾಲ ಮಂಜೂರಾತಿಗಾಗಿ ಬ್ಯಾಂಕಿಗೆ ಸಲ್ಲಿಸಿ, ಜಂಟಿ ಬಾದ್ಯತಾ ಗುಂಪು ಮತ್ತು ವೈಯಕ್ತಿಕ ಫಲಾನುಭವಿಗಳ ಘಟಕ ಸ್ಥಾಪನೆಯಾಗುವವರೆಗೂ ಮಾರ್ಗದರ್ಶನ ನೀಡುತ್ತಾರೆ.

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ರಾಜ್ಯದ ಆರ್‌ಸೆಟಿ/ರೂಡ್‌ಸೆಟಿ ನಿರ್ದೇಶಕರು, ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರುಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು, ಇತರೆ ಅನುಷ್ಠಾನ ಇಲಾಖೆ ಮತ್ತು ಬ್ಯಾಂಕ್ ಸಿಬ್ಬಂದಿಗಳಿಗೆ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಬಗ್ಗೆ ಆರ್‌ಸೆಟಿ/ರೂಡ್‌ಸೆಟಿ ಗಳ ಮೂಲಕ ತರಬೇತಿ ನೀಡಿ ಅರಿವು ಮೂಡಿಸಲಾಗುತ್ತಿದೆ.

ಯೋಜನೆಯ ಬಗ್ಗೆ ಫಲಾನುಭವಿಗಳು ಮತ್ತು ತರಬೇತುದಾರರಿಗೆ ಸಂಪೂರ್ಣ ಮಾಹಿತಿ ಒದಗಿಸಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ **"ತರಬೇತಿ ಕೈಪಿಡಿ"** ಮತ್ತು **"ನಮ್ಮ ಪುಸ್ತಕ"** ಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ. ಕೌಶಲ್ಯಾಭಿವೃದ್ಧಿ ವೃತ್ತಿ ತರಬೇತಿ ಆಧಾರಿತ ಉದ್ಯೋಗಕ್ಕೆ ಸಂಬಂಧಿಸಿದಂತೆ ಈಗಾಗಲೇ ಗದಗ, ಕೊಪ್ಪಳ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಫಲಾನುಭವಿಗಳು ವಿವಿಧ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ನೇರವಾಗಿ ಭೇಟಿ ಮಾಡಿ ತಮಗೆ ಇಚ್ಛೆ ಇರುವ ಟ್ರೇಡ್ ಆಯ್ಕೆ ಮಾಡಿಕೊಳ್ಳಲು ಅನುಕೂಲವಾಗುತ್ತದೆ.

ಸ್ವ–ಉದ್ಯೋಗದಡಿ ಸಾಲ ಮಂಜೂರಾತಿಯ ಕುರಿತ ಪ್ರಗತಿ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ, ಸಾಲ ಮಂಜೂರಾತಿಯಾದ ಫಲಾನುಭವಿಗಳು ಉದ್ಯಮಶೀಲತಾ ತರಬೇತಿಯನ್ನು ಪಡೆದು ಸ್ವ–ಉದ್ಯೋಗ ಘಟಕಗಳನ್ನು ಸ್ಥಾಪಿಸುತ್ತಾರೆ.

## ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಸ್ವ–ಉದ್ಯೋಗದ ಕಾರ್ಯಕ್ರಮದ ಪ್ರಗತಿ ವಿವರ

| ಕ್ರ ಸಂ | ಜಿಲ್ಲಾ ಪಂಚಾಯತಿಯ ಹೆಸರು | ಭೌತಿಕ ಗುರಿ 2017–18 | ಸಾಲ ಮಂಜೂರಾದ ಮತ್ತು ತರಬೇತಿ ಪಡೆದ ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 1 | ಬಾಗಲಕೋಟೆ | 1078 | 1363 |
| 2 | ಬೆಂಗಳೂರು(ಗ್ರಾ) | 683 | 513 |
| 3 | ಬೆಂಗಳೂರು(ನ) | 919 | 242 |
| 4 | ಬೆಳಗಾಂ | 3516 | 2779 |
| 5 | ಬಳ್ಳಾರಿ | 1319 | 3292 |
| 6 | ಬೀದರ್ | 906 | 532 |
| 7 | ಬಿಜಾಪುರ | 1288 | 719 |
| 8 | ಚಾಮರಾಜನಗರ | 975 | 707 |
| 9 | ಚಿಕ್ಕಬಳ್ಳಾಪುರ | 1059 | 602 |
| 10 | ಚಿಕ್ಕಮಗಳೂರು | 928 | 0 |
| 11 | ಚಿತ್ರದುರ್ಗ | 1415 | 1700 |
| 12 | ದಕ್ಷಿಣ ಕನ್ನಡ | 1005 | 0 |
| 13 | ದಾವಣಗೆರೆ | 1334 | 1286 |
| 14 | ಧಾರವಾಡ | 835 | 0 |
| 15 | ಗದಗ | 594 | 1041 |
| 16 | ಗುಲ್ಬರ್ಗ | 944 | 0 |
| 17 | ಹಾಸನ | 1699 | 1246 |
| 18 | ಹಾವೇರಿ | 1210 | 276 |
| 19 | ಕೊಡಗು | 476 | 77 |
| 20 | ಕೋಲಾರ | 1039 | 841 |
| 21 | ಕೊಪ್ಪಳ | 1035 | 0 |
| 22 | ಮಂಡ್ಯ | 1549 | 2749 |
| 23 | ಮೈಸೂರು | 1580 | 2606 |
| 24 | ರಾಮನಗರ | 837 | 60 |
| 25 | ರಾಯಚೂರು | 931 | 1180 |
| 26 | ಶಿವಮೊಗ್ಗ | 1179 | 314 |
| 27 | ತುಮಕೂರು | 2426 | 224 |
| 28 | ಉಡುಪಿ | 708 | 128 |
| 29 | ಉತ್ತರ ಕನ್ನಡ | 1091 | 733 |
| 30 | ಯಾದಗಿರಿ | 541 | 0 |
| | **ಒಟ್ಟು** | **35100** | **25210** |

## ಗ್ರಾಮೀಣ ಸ್ವ ಉದ್ದಿಮೆ ತರಬೇತಿ ಕೇಂದ್ರಗಳು (ಆರ್‌ಸೆಟಿ):

ಆರ್‌ಸೆಟಿ ಕೇಂದ್ರಗಳು ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗಿ ಯುವಕ–ಯುವತಿಯರಿಗೆ ಸ್ವ ಉದ್ಯೋಗ ಕುರಿತು ವಿವಿಧ ರೀತಿಯ ತರಬೇತಿ ನೀಡುತ್ತಿರುವ ಕೇಂದ್ರಗಳಾಗಿವೆ. ರಾಜ್ಯದಲ್ಲಿನ 29 ಜಿಲ್ಲೆಗಳಲ್ಲಿ ಪ್ರಸ್ತುತ 33 ತರಬೇತಿ ಕೇಂದ್ರಗಳಿದ್ದು, ಅವಶ್ಯಕವಾದ ಎಲ್ಲಾ ಸೌಕರ್ಯಗಳು ಮತ್ತು ಮಾನವ ಸಂಪನ್ಮೂಲವನ್ನು ಹೊಂದಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಸುಮಾರು 112 ವಿವಿಧ ರೀತಿಯ ತರಬೇತಿಗಳನ್ನು ನೀಡಲಾಗುತ್ತಿದೆ.

**ಆರ್‌ಸೆಟಿ ಸಂಸ್ಥೆಗಳಲ್ಲಿ 2017–18ನೇ ಸಾಲಿನ ಪ್ರಗತಿ ವಿವರ**

| | **2017–18** |
|---|---|
| ಒಟ್ಟು ಗುರಿ | 25040 |
| ಒಟ್ಟು ತರಬೇತಿ ಪಡೆದ ಅಭ್ಯರ್ಥಿಗಳು | 27515 |
| ಒಟ್ಟು ಬಿ.ಪಿ.ಎಲ್ ಅಭ್ಯರ್ಥಿಗಳು | 21847 |
| ಒಟ್ಟು ಪ.ಜಾ ಅಭ್ಯರ್ಥಿಗಳು | 7156 |
| ಒಟ್ಟು ಪ.ಪಂ ಅಭ್ಯರ್ಥಿಗಳು | 2932 |
| ಒಟ್ಟು ಅಲ್ಪಸಂಖ್ಯಾತ ಅಭ್ಯರ್ಥಿಗಳು | 2038 |
| ಒಟ್ಟು ಮಹಿಳಾ ಅಭ್ಯರ್ಥಿಗಳು | 14494 |
| ಒಟ್ಟು ಬ್ಯಾಂಕ್ ಸಾಲ ನೆರವು ಪಡೆದ ಅಭ್ಯರ್ಥಿಗಳು | 5220 |
| ಒಟ್ಟು ಸ್ವಂತ ಬಂಡವಾಳ ತೊಡಗಿಸಿದ ಅಭ್ಯರ್ಥಿಗಳು | 5622 |
| ಉದ್ಯೋಗ ರೂಪಿಸಿದ ಅಭ್ಯರ್ಥಿಗಳು | 773 |
| ಮುಂಗಡ ಆಯವ್ಯಯ (ರೂ. ಕೋಟಿಗಳಲ್ಲಿ) | 7.26 |
| ಒಟ್ಟು ಖರ್ಚು (ರೂ. ಕೋಟಿಗಳಲ್ಲಿ) | 5.71 |

## ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯು–ಜಿಕೆವೈ)

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯು ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಯೋಜನೆಯಾಗಿದ್ದು, ಈ ಯೋಜನೆಯನ್ನು **"ಆಜೀವಿಕಾ ಕೌಶಲ್ಯಾಭಿವೃದ್ಧಿ ಯೋಜನೆ"** ಎಂದು ಪ್ರಾರಂಭ ಮಾಡಿದ್ದು, ಕೇಂದ್ರ ಸರ್ಕಾರದ ಸುತ್ತೋಲೆಯಂತೆ **"ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ"** ಎಂದು ಮರುನಾಮಕರಣ ಮಾಡಲಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅವುಗಳ ಸಹಯೋಗದೊಂದಿಗೆ ಕೌಶಲ್ಯವನ್ನು ಅಭಿವೃದ್ಧಿಪಡಿಸಲು ತರಬೇತಿ ನೀಡಿ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ.

**ಪ್ರಗತಿ ವಿವರ:**

ಕರ್ನಾಟಕ ರಾಜ್ಯವು ಎ.ಎ.ಪಿ ರಾಜ್ಯವಾಗಿರುವುದರಿಂದ ಈಗಾಗಲೇ ಕ್ರಿಯಾ ಯೋಜನೆಯ ಪ್ರಕಾರ ಅನುಷ್ಠಾನಗೊಳಿಸಲಾಗುತ್ತಿದ್ದು, ಇದುವರೆಗೂ 31 ಯೋಜನಾ ಅನುಷ್ಠಾನ ಸಂಸ್ಥೆಗಳೊಂದಿಗೆ ಒಡಂಬಡಿಕೆ (ಎಂ.ಓ.ಯು) ಮಾಡಿಕೊಂಡಿದ್ದು, ಆ ಪ್ರಕಾರವಾಗಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಒಟ್ಟು 31 ಯೋಜನಾ ಅನುಷ್ಠಾನ ಸಂಸ್ಥೆಗಳಲ್ಲಿ 22 ಯೋಜನಾ ಅನುಷ್ಠಾನ ಸಂಸ್ಥೆಗಳು ಮಾತ್ರ ಸಕ್ರಿಯವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿವೆ.

ವಿಶ್ಲೇಷಣೆಯ ಪ್ರಕಾರ ಎಲ್ಲಾ ಜಿಲ್ಲೆಗಳಲ್ಲಿಯೂ ಯೋಜನಾ ಅನುಷ್ಠಾನ ಸಂಸ್ಥೆಗಳು ಇದ್ದು, ಕೆಲವೊಂದು ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯ ಸಂಸ್ಥೆಗಳಿವೆ. ನಾಲ್ಕು ಜಿಲ್ಲೆಗಳಲ್ಲಿ ತುಂಬಾ ಕಡಿಮೆ ಸಂಖ್ಯೆಯ ಯೋಜನಾ ಅನುಷ್ಠಾನ ಸಂಸ್ಥೆಗಳಿವೆ.

ಕರ್ನಾಟಕ ರಾಜ್ಯದಲ್ಲಿ ಸದರಿ ಯೋಜನೆಯಲ್ಲಿ 2012–13 ಮತ್ತು 2014–15ರಲ್ಲಿ 43 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, 31 ಸಂಸ್ಥೆಗಳಿಂದ 1,18,173 ಗ್ರಾಮೀಣ ಪ್ರದೇಶದ ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ ಕೊಟ್ಟು ಉದ್ಯೋಗ ಒದಗಿಸುವ

ಗುರಿಯನ್ನು ಹೊಂದಿದೆ. ಮೊದಲಿಗೆ ಈ ಗುರಿ ಸಾಧಿಸಲು ರೂ.456 ಕೋಟಿ ಕೇಂದ್ರ/ರಾಜ್ಯ ಸರ್ಕಾರಗಳ ಅನುದಾನವಿದ್ದು ತದನಂತರ ಪರಿಷ್ಕೃತ ದರದ ಪ್ರಕಾರ (ಸಿ.ಎನ್.ಎನ್) ಕಾಸ್ಟ್ ನಾರ್ಮ್ ನೋಟಿಫಿಕೇಷನ್ ಮೂರು ವರ್ಷಗಳಿಗೆ (2016–17 ರಿಂದ 2018–19) ಗುರಿಯು 89,804 ಅಭ್ಯರ್ಥಿಗಳಿಗೆ ಇದ್ದು, ಅನುದಾನ ರೂ.708.25 ಕೋಟಿ ಆಗಿರುತ್ತದೆ. ಇದು ಬೆಂಬಲ ವೆಚ್ಚ ಸೇರಿದಂತೆ ಯೋಜನೆ ಆಗಿದೆ.

31 ಸಂಸ್ಥೆಗಳಲ್ಲಿ 6 ಯೋಜನಾ ಅನುಷ್ಠಾನ ಸಂಸ್ಥೆಗಳು ಅನುಷ್ಠಾನ ಸಾಮರ್ಥ್ಯದಲ್ಲಿ ಗುರಿ ಸಾಧಿಸಲು ಸಾಧ್ಯವಾಗದಿದ್ದರಿಂದ ರದ್ದುಗೊಳಿಸಲಾಗಿದೆ. ಒಟ್ಟಿನಲ್ಲಿ 32 ಸಂಸ್ಥೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ.

**ಕೋಷ್ಟಕ : 14 2017–18 ನೇ ಸಾಲಿನ ಪ್ರಗತಿ ವಿವರ**

| ವರ್ಷ | ಯೋಜನಾ ಅನುಷ್ಠಾನ ಸಂಸ್ಥೆಗಳು | ಗುರಿ | ತರಬೇತಿ ಮತ್ತು ಉದ್ಯೋಗ ದೊರಕಿಸಿರುವುದು (ಮಾರ್ಚ್ 2017ರವರೆಗೆ) | | |
|---|---|---|---|---|---|
| | | | ಕ್ರೂಢೀಕರಣೆ & ನೋಂದಣೆ | ತರಬೇತಿ ಪಡೆದವರು | ಉದ್ಯೋಗ ಪಡೆದವರು |
| 2017 – 18 | 32 | 30,000 | 37716 | 30706 | 11729 |
| 2018 – 19 | 42 | 20,000 | 0 | 0 | 0 |

**ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದಿಂದ ಅನುಮೋದಿತವಾಗಿರುವ ಯೋಜನಾ ಅನುಷ್ಠಾನ ಸಂಸ್ಥೆಗಳ ಕ್ರೋಢೀಕೃತ ಮಾಹಿತಿ 2017–18**

2017–18ನೇ ಸಾಲಿನಲ್ಲಿ ಮಾರ್ಚ್ 2018ರ ಅಂತ್ಯಕ್ಕೆ 11729 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿಯೊಂದಿಗೆ ಉದ್ಯೋಗ ಕಲ್ಪಿಸಲಾಗಿದೆ. ಆದರೆ, ಮೂರು ತಿಂಗಳ ಕೋರ್ಸ್‌ಗಳು ಮಾತ್ರ ಇದ್ದು ಈಗ ಆರು, ಒಂಭತ್ತು ಮತ್ತು ಹನ್ನೆರೆಡು ತಿಂಗಳ ಟ್ರೇಡ್ಸ್‌ಗಳಲ್ಲಿ ಗಮನಹರಿಸಲು ಎರಡು ವರ್ಷಗಳಲ್ಲಿ ಯೋಜಿಸಲಾಗಿದೆ.

ಮಾರ್ಚ್ 2018 ರ ಅಂತ್ಯಕ್ಕೆ ಮೊದಲ ಹಂತದಿಂದ ನಾಲ್ಕನೇ ಹಂತದವರೆಗೆ 140 ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರಗಳು ಸ್ಥಾಪನೆಗೊಂಡಿವೆ. ಇವುಗಳಲ್ಲಿ 55 ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಉಳಿದ 7 ಪಿ.ಐ.ಎಗಳಲ್ಲಿ ಮೊದಲಿನ ಬ್ಯಾಚ್‌ಗಳು ಪೂರ್ಣಗೊಂಡಿದ್ದು ತರಬೇತಿ ಪ್ರಾರಂಭವಾಗಬೇಕಿದೆ.

**ಪರಿವೀಕ್ಷಣೆ ಮತ್ತು ಕ್ಷೇತ್ರ ಭೇಟಿಗಳು**

ಈ ಅವಧಿಯಲ್ಲಿ ಸಂಸ್ಥೆಗಳ 34 ತರಬೇತಿ ಕೇಂದ್ರಗಳಿಗೆ ಭೇಟಿ ನೀಡಿದ್ದು 27 ಕೇಂದ್ರಗಳಿಗೆ ತರಬೇತಿಯನ್ನು ನೀಡಲು ಅನುಮತಿಯನ್ನು ನೀಡಲಾಗಿದೆ. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು ಹಾಗೂ ಎನ್.ಐ.ಆರ್.ಡಿ ಅಧಿಕಾರಿಗಳನ್ನು ಒಳಗೊಂಡ ತಂಡವು ಒಟ್ಟು 43 ಕ್ಷೇತ್ರ ಭೇಟಿ ಮತ್ತು ಪರಿವೀಕ್ಷಣೆ ಮಾಡಿದೆ.

**ವಿಮರ್ಶಾತ್ಮಕ ಸಮಸ್ಯೆಗಳು**

- ಜಿಲ್ಲೆಗಳ ಬೇಡಿಕೆಯಂತೆ ವಿವಿಧ ಕೌಶಲ್ಯಗಳ ಕೋರ್ಸ್ ಅಗತ್ಯವಿದೆ. ಆದರೆ, ನಮ್ಮಲ್ಲಿ ಕಡಿಮೆ ಕೌಶಲ್ಯಗಳ ಕೋರ್ಸ್‌ಗಳಿವೆ.
- ಸಂಪನ್ಮೂಲಗಳನ್ನು ಕ್ರೋಢೀಕರಿಸುವಲ್ಲಿ ಎಂಐಎಸ್‌ನಲ್ಲಿನ ಸಮಸ್ಯೆಗಳು.
- ಕಾರ್ಮಿಕ ಮಾರುಕಟ್ಟೆಯ ಮಾಹಿತಿ ಪದ್ಧತಿಯ ಅಲಭ್ಯತೆ.
- ಸಂಸ್ಥೆಗಳು ತರಬೇತಿ ಕೊಡುವಲ್ಲಿ ಪಠ್ಯಕ್ರಮ, ಸಾಮಾಗ್ರಿ ಮಾರ್ಗಸೂಚಿಯಂತೆ ಅನುಷ್ಠಾನ ಮಾಡಲು ಇನ್ನು ಹೆಚ್ಚಿನ ಸಾಮರ್ಥ್ಯ ಬೇಕಾಗಿರುವುದು.
- ಭಾಗವಹಿಸುವಿಕೆ ಮತ್ತು ಕಲಿಕೆಯಲ್ಲಿ ಹೆಚ್ಚಿನ ಅವಕಾಶಗಳು ಬೇಕಾಗಿರುವುದು.
- ಅಭಿಯಾನದ ರೀತಿಯಲ್ಲಿ ಕೆಲಸ ಮಾಡಲು ಸಿಬ್ಬಂದಿಗಳ ಮತ್ತು ಪೂರಕ ವ್ಯವಸ್ಥೆ ಕೊರತೆ.

- ಕೌಶಲ್ಯ ತರಬೇತಿಗಳ ಗುಣಮಟ್ಟ ಮೌಲ್ಯಮಾಪನದಲ್ಲಿರುವ ತೊಂದರೆಗಳು.

ಒಟ್ಟಾರೆ ಕರ್ನಾಟಕದಲ್ಲಿ 30 ಜಿಲ್ಲೆಗಳಿಗೂ ಸಾಕಷ್ಟು ತರಬೇತಿ ಕೇಂದ್ರಗಳು ಅಂದರೆ ಪ್ರತಿ ಜಿಲ್ಲೆಗೂ ಕನಿಷ್ಠ 5 ರಿಂದ 10 ಕೇಂದ್ರಗಳಿದ್ದರೆ ಕೌಶಲ್ಯ ಬೇಡಿಕೆಗನುಸಾರವಾಗಿ ಗುರಿ ಸಾಧಿಸಲು ಸಕ್ರೀಯವಾಗಿ ಯೋಜನಾ ಬೆಂಬಲ ಸಂಸ್ಥೆಗಳ ಸಹಾಯ ಅನುಕೂಲವಾಗುತ್ತದೆ.

**ಕೋಷ್ಟಕ: 15 ಯೋಜನಾ ಅನುಷ್ಠಾನ ಸಂಸ್ಥೆಗಳ ಪ್ರಗತಿ ವಿವರ**

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಪರಿಷ್ಕೃತ ಗುರಿಗಳು | ಸಕ್ರಿಯವಾಗಿರುವ ತರಬೇತಿ ಕೇಂದ್ರಗಳು | ಮುಚ್ಚಲಾದ ತರಬೇತಿ ಕೇಂದ್ರಗಳು | ಅನುಮೋದಿತ ತರಬೇತಿ ಕೇಂದ್ರಗಳು | ಒಟ್ಟು ದಾಖಲಾದ ಅಭ್ಯರ್ಥಿಗಳು | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|---|
| 1 | LAURUS EDUTECH PRIVATE LIMITED | 3243 | 0 | 4 | 4 | 1435 | 1152 | 0 | 304 |
| 2 | KAPSTON FACILITIES MANAGEMENT PVT LTD | 943 | 1 | 2 | 3 | 1045 | 847 | 24 | 360 |
| 3 | TECHNOPAK ADVISORS PVT LTD* | | 0 | 2 | 2 | 291 | 144 | 0 | 0 |
| 4 | WAZIR ADVISORS PRIVATE LIMITED | 3680 | 0 | 10 | 10 | 4055 | 3680 | 0 | 2374 |
| 5 | SHRIRAM NEW HORIZONS LIMITED* | | 0 | 4 | 4 | 866 | 592 | 0 | 16 |
| 6 | APPAREL RETAIL TRAINING AND JOB SOLUTIONS | 1786 | 0 | 4 | 4 | 1954 | 1786 | 0 | 1260 |
| 7 | QUESS CORP LTD | 3176 | 5 | 1 | 6 | 3498 | 2623 | 390 | 556 |
| 8 | AVON FACILITY MANAGEMENT SERVICES LTD | 3445 | 3 | 2 | 5 | 3707 | 3032 | 216 | 1019 |
| 9 | HELIOS AND MATHESON IT BANGALORE LIMITED* | | 0 | 0 | 0 | | | 0 | |
| 10 | COFFEE DAY GLOBAL LIMITED | 1626 | 0 | 3 | 3 | 1075 | 821 | 0 | 379 |
| 11 | ORION EDUTECH PVT LTD | 3749 | 0 | 10 | 10 | 3804 | 3749 | 0 | 1604 |
| 12 | ITCOT CONSULTANCY AND SERVICES LTD | 3600 | 14 | 0 | 14 | 2883 | 2316 | 866 | 986 |
| 13 | ICFE SKILLS SOLUTION PRIVATE LIMITED* | 1206 | 0 | 5 | 5 | 782 | 648 | 61 | 136 |
| 14 | APITCO LIMITED* | 11477 | 0 | 23 | 23 | 4204 | 3571 | 594 | 624 |
| 15 | ICA EDU SKILLS PRIVATE LIMITED* | 1900 | 1 | 4 | 5 | 1064 | 971 | 0 | 291 |

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಪರಿಷ್ಕೃತ ಗುರಿಗಳು | ಸಕ್ರಿಯವಾಗಿರುವ ತರಬೇತಿ ಕೇಂದ್ರಗಳು | ಮುಚ್ಚಲಾದ ತರಬೇತಿ ಕೇಂದ್ರಗಳು | ಅನುಮೋದಿತ ತರಬೇತಿ ಕೇಂದ್ರಗಳು | ಒಟ್ಟು ದಾಖಲಾದ ಅಭ್ಯರ್ಥಿಗಳು | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|---|
| 16 | BVG INDIA LIMITED | 2590 | 0 | 4 | 4 | 609 | 553 | 0 | 227 |
| 17 | TEAMLEASE SERVICES LTD | 1625 | 0 | 4 | 4 | 1018 | 940 | 0 | 177 |
| 18 | SAHITHI SYSTEMS PRIVATE LIMITED | 900 | 1 | 0 | 1 | 345 | 242 | 70 | 110 |
| 19 | FIDELIS CORPORATE SOLUTIONS PRIVATE LIMITED | 1203 | 4 | 0 | 4 | 847 | 708 | 116 | 452 |
| 20 | NISA INDUSTRIAL SERVICES PRIVATE LIMITED | 2190 | 3 | 1 | 4 | 471 | 390 | 54 | 165 |
| 21 | TTI GLOBAL PVT LTD | 845 | 3 | 0 | 3 | 813 | 681 | 56 | 323 |
| 22 | RURALSHORES SKILLS ACADEMY PVT LTD | 1815 | 0 | 2 | 2 | 580 | 511 | 0 | 207 |
| 23 | MALANKARA SOCIAL SERVICE SOCIETY | 200 | 1 | 0 | 1 | 149 | 140 | 0 | 62 |
| 24 | GOVERNMENT TOOL ROOM AND TRAINING CENTRE | | 0 | 0 | 0 | | | 0 | |
| 25 | SAMARTHANAM TRUST FOR THE DISABLED | 579 | 2 | 0 | 2 | 415 | 324 | 18 | 97 |
| 26 | HIMATSINGIKA LINENS | 725 | 1 | 0 | 1 | 455 | 164 | 177 | 0 |
| 27 | WAZIR ADVISORS PRIVATE LIMITED- II | 385 | 1 | 0 | 1 | 276 | 121 | 111 | 0 |
| 28 | ORION EDUTECH PVT LTD-II | 700 | 2 | 0 | 2 | 280 | 0 | 280 | 0 |
| 29 | APOLLO MEDSKILLS PVT LTD | 535 | 1 | 0 | 1 | 162 | 0 | 154 | 0 |
| 30 | APPAREL RETAIL TRAINING AND JOB SOLUTIONS - II | | 3 | 0 | 3 | 288 | 0 | 261 | |
| 31 | SURYA WIRES PRIVATE LIMITED | 630 | 1 | 0 | 1 | | | 0 | |
| 32 | CADMAXX SOLUTIONS PVT LTD | 245 | 3 | 0 | 3 | 100 | 0 | 98 | 0 |
| 33 | VISHWA BHARATHI EDUCATIONAL DEVELOPMENT TRUST | 0 | 1 | 0 | 1 | 70 | 0 | 70 | 0 |
| 34 | KAPSTON FACILITIES MANAGEMENT PVT LTD | 0 | 1 | 0 | 1 | 70 | 0 | 69 | 0 |

| ಕ್ರ. ಸಂ | ಯೋಜನಾ ಅನುಷ್ಠಾನ ಸಂಸ್ಥೆ | ಪರಿಷ್ಕೃತ ಗುರಿಗಳು | ಸಕ್ರಿಯವಾಗಿರುವ ತರಬೇತಿ ಕೇಂದ್ರಗಳು | ಮುಚ್ಚಲಾದ ತರಬೇತಿ ಕೇಂದ್ರಗಳು | ಅನುಮೋದಿತ ತರಬೇತಿ ಕೇಂದ್ರಗಳು | ಒಟ್ಟು ದಾಖಲಾದ ಅಭ್ಯರ್ಥಿಗಳು | ಒಟ್ಟು ತರಬೇತಿ ಪೂರ್ಣಗೊಂಡ ಅಭ್ಯರ್ಥಿಗಳ ಸಂಖ್ಯೆ | ತರಬೇತಿ ಪಡೆಯು ತ್ತಿರುವ ಅಭ್ಯರ್ಥಿಗಳ ಸಂಖ್ಯೆ | ಉದ್ಯೋಗ ಅವಕಾಶ ಕಲ್ಪಿಸಲಾದ ಅಭ್ಯರ್ಥಿಗಳ ಸಂಖ್ಯೆ |
|---|---|---|---|---|---|---|---|---|---|
| 35 | MANPOWERGROUP SERVICES INDIA PVT LTD | 210 | 1 | 0 | 1 | 35 | 0 | 35 | 0 |
| 36 | INVOLUTE INSTITUTE OF TECHNICAL TRAINING PRIVATE LIMITED | 140 | 0 | 0 | 0 | | | 0 | |
| 37 | SRI. MANJUNATHA EDUCATION TRUST | | 0 | 0 | 0 | | | 0 | |
| 38 | MPTA EDUCATIONAL TRUST | 140 | 2 | 0 | 2 | 70 | | 87 | 0 |
| | **TOTAL** | **55488** | **55** | **85** | **140** | **37716** | **30706** | **3807** | **11729** |

*Note: * No. of SUSPENDED PIAs - 6*

**ಬೆಂಬಲ ವೆಚ್ಚದಲ್ಲಿನ ಚಟುವಟಿಕೆಗಳು**

**ಕೌಶಲ್ಯ ಬೇಡಿಕೆ ಕಾರ್ಯಾಗಾರ:**

ಉದ್ಯೋಗ ಮತ್ತು ತರಬೇತಿ, ಕಾರ್ಮಿಕ ಇಲಾಖೆ, ಕೈಗಾರಿಕೆ ಮತ್ತು ವಾಣಿಜ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯುವ ಸಬಲೀಕರಣ ಇಲಾಖೆ–ಎನ್‌ವೈಕೆ ಮತ್ತು ಕಾರ್ಯನಿರ್ವಹಿಸುತ್ತಿರುವ ಯೋಜನಾ ಅನುಷ್ಠಾನ ಸಂಸ್ಥೆ/ ಯೋಜನಾ ಬೆಂಬಲ ಸಂಸ್ಥೆಗಳಿಂದ ಯೋಜನೆಯ ಅನುಸಾರ ಕೌಶಲ್ಯ ಬೇಡಿಕೆ ಕಾರ್ಯಾಗಾರವನ್ನು ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗಿದೆ. ಇದುವರೆವಿಗೂ 24 ಕಾರ್ಯಾಗಾರಗಳು ಆಯೋಜಿಸಲಾಗಿದ್ದು, ಉಳಿದ ಕಾರ್ಯಾಗಾರಗಳನ್ನು ಆಯೋಜಿಸಲು ಸೂಚಿಸಲಾಗಿದೆ.

**ಅಭ್ಯರ್ಥಿಗಳ ಒಗ್ಗೂಡಿಸುವಿಕೆ:**

ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳ ಸಹಯೋಗದೊಂದಿಗೆ, ಸಂಬಂಧಪಟ್ಟ ಯೋಜನಾ ಅನುಷ್ಠಾನ ಸಂಸ್ಥೆಗಳು ಶಿಬಿರಗಳನ್ನು ಗ್ರಾಮ/ಗ್ರಾಮ ಪಂಚಾಯತ್ ಮಟ್ಟದಲ್ಲಿ ಆಯೋಜಿಸಿ ಅಭ್ಯರ್ಥಿಗಳ ಆಯ್ಕೆಗಾಗಿ ಸಮಾಲೋಚನಾ ಕಾರ್ಯಕ್ರಮವನ್ನು ಗ್ರಾಮ ಸಭೆಗಳ ಮೂಲಕ ಏರ್ಪಡಿಸಿದೆ. ಇದುವರೆವಿಗೂ, 29500 ಅಭ್ಯರ್ಥಿಗಳಿಗೆ ಗ್ರಾಮ ಹಾಗೂ ತಾಲ್ಲೂಕು ಪಂಚಾಯತ್‌ಗಳಿಂದ ಜಿಲ್ಲೆಗಳ ಮೂಲಕ ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಲಾಗಿದೆ.

**ಸಾಗರಮಾಲ ಯೋಜನೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ:**

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಸೂಚನೆಗಳನ್ವಯ ಹಾಗೂ ನಿರ್ದೇಶನಗಳಿಗನುಸಾರ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ "ಸಾಗರ ಮಾಲ" ಎಂಬ ಯೋಜನೆಯನ್ನು ಡಿಡಿಯು–ಜಿಕೆವೈ ಅಡಿಯಲ್ಲಿ (ಕೊಲ್ಲಿ ಪ್ರದೇಶಗಳಲ್ಲಿ ಬರುವ ಜಿಲ್ಲೆಗಳು ಹಾಗೂ ಎಲ್ಲಿ ಹಡಗು ನಿರ್ಮಾಣ ಮತ್ತು ಬಂದರುಗಳಿರುವ ಜಾಗದಲ್ಲಿ ನಿರುದ್ಯೋಗಿ ಯುವಜನತೆಗೆ ಕೌಶಲ್ಯ ತರಬೇತಿ ಕೊಟ್ಟು ಉದ್ಯೋಗ ಕಲ್ಪಿಸಲಾಗುವುದು) ಅನುಷ್ಠಾನಗೊಳಿಸಲಾಗುತ್ತಿದ್ದು, ಕೌಶಲ್ಯ ಅಭಿವೃದ್ಧಿಯೊಂದಿಗೆ ಉದ್ಯೋಗ ದೊರಕಿಸಿಕೊಡುವುದನ್ನು National Shipping Corporation & Development ಸಂಸ್ಥೆಯಡಿ ಒಪ್ಪಂದ ಮಾಡಿಕೊಳ್ಳಲಾಗಿದೆ.

ಇದರ ಮುಖ್ಯ ಗುರಿ ಎಂದರೆ ಹಡಗು ನಿರ್ವಹಣೆ ಮತ್ತು ಬಂದರುಗಳ ಸಮಗ್ರ ಅಭಿವೃದ್ಧಿ ಯೋಜನೆ ಮತ್ತು ಕೈಗಾರಿಕಾ ವಲಯಗಳಲ್ಲಿ ಚಾಲಕರು, ತಾಂತ್ರಿಕರು, ಆರ್ಥಿಕ ವಲಯ ಪ್ರದೇಶಗಳಲ್ಲಿನ ಸಹಾಯಕರನ್ನು ಆಯ್ಕೆ ಮಾಡಿ ಕರಾವಳಿ ಪ್ರದೇಶಗಳಲ್ಲಿನ ಬಂದರುಗಳಲ್ಲಿ ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸುವುದಾಗಿದೆ. ಇದರನ್ವಯ ಅಭ್ಯರ್ಥಿಗಳ ತರಬೇತಿಗಾಗಿ ಈ ಯೋಜನೆಯನ್ನು ಮೇಲಿನ 3 ಜಿಲ್ಲೆಗಳಲ್ಲಿ 15 ಆಗಸ್ಟ್ 2015 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೆ ದಿನಾಂಕ 31.03.2017ರ ಅಂತ್ಯಕ್ಕೆ ಸುಮಾರು 320 ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ಕೊಟ್ಟಿದ್ದು 272 ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಲಾಗಿದೆ.

## ಕರ್ನಾಟಕ ಮಲ್ಟಿ ಸೆಕ್ಟೋರಿಯಲ್ ಪೌಷ್ಠಿಕ ಪ್ರಾಯೋಗಿಕ ಯೋಜನೆ

ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕುಗಳಲ್ಲಿನ ಕಲಿಕೆಯ ಆಧಾರದ ಮೇಲೆ, ಈ ಯೋಜನೆಯು, ಗುಲ್ಬರ್ಗಾ ಜಿಲ್ಲೆಯ ಚಿಂಚೋಳ್ಳಿ ತಾಲ್ಲೂಕು ಮತ್ತು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಜಪಾನ್ ಸೋಶಿಯಲ್ ಡೆವೆಲಪಮೆಂಟ್ ಫಂಡ್ ಮತ್ತು ವಿಶ್ವ ಬ್ಯಾಂಕ್ ನೆರವಿನ ಅನುದಾನ ದೊರೆತಿರುತ್ತದೆ.

**ಯೋಜನೆಯ ಮುಖ್ಯ ಉದ್ದೇಶಗಳು**

1. ಪೋಷಕಾಂಶ ಕೊರತೆ ಇರುವ ಶಿಶುಗಳ ಅಂದರೆ 3 ವರ್ಷದೊಳಗಿನ ಮಕ್ಕಳು ವಿಶೇಷವಾಗಿ 0–2 ವರ್ಷ ಮತ್ತು ಕಿಶೋರಿಯರು ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರ ಪೌಷ್ಟಿಕತೆ ತೀರ ಕಡಿಮೆಯಾಗದಂತೆ ನೋಡಿಕೊಳ್ಳುವುದು.
2. ಮೂರು ವರ್ಷದೊಳಗಿನ ಮಕ್ಕಳಲ್ಲಿ ಅದರಲ್ಲೂ ವಿಶೇಷವಾಗಿ 0–2 ವರ್ಷದೊಳಗಿನ ಮಕ್ಕಳಲ್ಲಿ ದೃಢೀಕೃತವಾದ ಹಾಗೂ ತೀವ್ರವಾದ ಅಪೌಷ್ಟಿಕತೆಯನ್ನು ತಡೆಗಟ್ಟುವುದು.
3. ಮೂರು ವರ್ಷದೊಳಗಿನ ಮಕ್ಕಳಲ್ಲಿ, ಕಿಶೋರಿಯರಲ್ಲಿ ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಲ್ಲಿ ರಕ್ತಹೀನತೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಕಡಿಮೆಗೊಳಿಸುವುದು.
4. ಕಿಶೋರಿಯರಲ್ಲಿ ಹಾಗೂ ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸುವುದು.
5. ಕಡಿಮೆ ತೂಕದ ಶಿಶುಗಳ ಜನನ ಪ್ರಮಾಣವನ್ನು ಕಡಿಮೆಗೊಳಿಸುವುದು.

**ಯೋಜನೆಯ ಅವಧಿ:** ಈ ಯೋಜನೆಯು 3 ವರ್ಷಗಳ ಅವಧಿಯಾಗಿದ್ದು, ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮತ್ತು ರಾಯಚೂರ ಜಿಲ್ಲೆಯ ದೇವದುರ್ಗ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ.

**ಯೋಜನೆಯ ಫಲಾನುಭವಿಗಳು**

1. 3 ವರ್ಷದೊಳಗಿನ ಮಕ್ಕಳು
2. 11 ರಿಂದ 18 ವರ್ಷದ ಕಿಶೋರಿಯರು
3. ಗರ್ಭಿಣಿ ಮಹಿಳೆಯರು ಹಾಗು ಹಾಲುಣಿಸುವ ತಾಯಂದಿರು

**ಯೋಜನೆಯ ಅನುಷ್ಠಾನ ಕಾರ್ಯತಂತ್ರ**

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರೇತರ ಸಂಸ್ಥೆಯು ಆಯ್ಕೆಯಾಗಿದ್ದು, ಈ ಸಂಸ್ಥೆಯ ಮುಖ್ಯ ಜವಾಬ್ದಾರಿಗಳೇನೆಂದರೆ, ಯೋಜನೆಯ ಪೌಷ್ಠಿಕ ಆಹಾರ ಘಟಕ ಸ್ಥಾಪಿಸುವುದು ಮತ್ತು ತಯಾರಿಕೆಯಲ್ಲಿ ಸ್ವ–ಸಹಾಯ ಸಂಘಗಳನ್ನು ತರಬೇತಿಗೊಳಿಸುವುದು ಹಾಗೂ ತಯಾರಿಸಿದ ಆಹಾರ ಪೊಟ್ಟಣಗಳನ್ನು ಗ್ರಾಮ ಸ್ವಯಂ ಸೇವಕರ ಮೂಲಕ ಫಲಾನುಭವಿಗಳಿಗೆ ವಿತರಿಸುವುದು.

ಕರ್ನಾಟಕ ಮಲ್ಟಿ–ಸೆಕ್ಟರ್ ನ್ಯೂಟ್ರಿಷನ್ ಪೈಲಟ್ ಯೋಜನೆಯು ಪೌಷ್ಟಿಕಾಂಶದ ಕೊರತೆಯನ್ನು ನೀಗಿಸಲು ಮತ್ತು ಕುಟುಂಬ ಆಯವ್ಯಯದಲ್ಲಿ ಸರಿಯಾದ ಪೌಷ್ಟಿಕತೆಯ ಮಗು ಮತ್ತು ತಾಯಿಯ ಆರೈಕೆ, ಹದಿಹರೆಯದವರ ಪೌಷ್ಟಿಕಾಂಶದ ಆರೈಕೆ ಮತ್ತು ಬೇಡಿಕೆಯನ್ನು ಸೃಷ್ಟಿಸುವ ಕುರಿತು ವರ್ತನೆಯ ಬದಲಾವಣೆ ತರಲು ಮಾಹಿತಿ , ಶಿಕ್ಷಣ ಮತ್ತು ಸಂವಹನ ಶಿಬಿರಗಳನ್ನು ಏರ್ಪಡಿಸುವುದು. ಸ್ವಚ್ಛತೆ, ಇಮ್ಯೂನೈಸೇಷನ್, ಸುರಕ್ಷಿತ ಕುಡಿಯುವ ನೀರು ಮತ್ತು ಮುಂತಾದ ಅಂತರ–ವಲಯ ಸೇವೆಗಳು ಮತ್ತು ಸಮುದಾಯದಲ್ಲಿ ಅಪೌಷ್ಟಿಕತೆಯನ್ನು ಸಮಾಲೋಚನೆಗಳ ಮೂಲಕ ಬಗೆಹರಿಸುವುದು.

ಸಾಂಪ್ರದಾಯಿಕ ಪೌಷಟಿಕಾಂಶದ ಸ್ಥಳೀಯ ಆಹಾರಗಳಾದ ಹಸಿರು ಎಲೆಗಳ ತರಕಾರಿ ಮತ್ತು ಹಣ್ಣುಗಳನ್ನು ಸೇವಿಸುವ ಪ್ರಾಮುಖ್ಯತೆ, ಧಾನ್ಯಗಳು ಇತ್ಯಾದಿಗಳನ್ನು ಹೆಣ್ಣು ಮಕ್ಕಳ ಆರೈಕೆ, ಸರಿಯಾದ ಗರ್ಭಧಾರಣೆಯ ತೂಕ ಮತ್ತು ಸುರಕ್ಷಿತ ಕುಡಿಯುವ ನೀರು ಮತ್ತು ಸ್ವಚ್ಛತೆ ಕಾಪಾಡುವುದು ಅವರ ಜೀವನದುದ್ದಕ್ಕೂ ಪ್ರಾಮುಖ್ಯತೆ ನೀಡುವುದು.



*ಕುಟುಂಬ ಸದಸ್ಯರೊಂದಿಗೆ ಗ್ರಾಮ ಪೌಷ್ಟಿಕ ಕಾರ್ಯಕರ್ತರ ಸಮಾಲೋಚನೆ*

ಶಕ್ತಿಯುತ ಆಹಾರ ಪೂರೈಕೆಯ ಮೂಲಕ ಕ್ಯಾಲೋರಿ–ಪ್ರೋಟೀನ್, ಸೂಕ್ಷ್ಮ ಪೌಷ್ಟಿಕ ಕೊರತೆಯನ್ನು ಪರಿಹರಿಸುವ ಮೂಲಕ ಇದನ್ನು ಅನುಸರಿಸಲಾಗುತ್ತದೆ. ಇಂಧನ ಆಹಾರ ಉತ್ಪಾದನಾ ಘಟಕಗಳನ್ನು ಚಿಂಚೋಳಿ ಮತ್ತು ದೇವದುರ್ಗದಲ್ಲಿ ಸ್ಥಾಪಿಸಲಾಗಿದೆ. ರಾಜ್ಯ ಆಹಾರ ಸುರಕ್ಷತೆ ನಿಬಂಧನೆಗಳಿಗನುಗುಣವಾಗಿ ಸ್ವಸಹಾಯ ಗುಂಪುಗಳ ಮಹಿಳೆಯರು ಉತ್ಪಾದನಾ ಘಟಕಗಳಲ್ಲಿ ಕೆಲಸ ಮಾಡಲು ತರಬೇತಿ ನೀಡಲಾಗಿದೆ. ಗ್ರಾಮೀಣ ಪೌಷ್ಟಿಕ ಕಾರ್ಯಕರ್ತರು ಮತ್ತು ಸ್ವಸಹಾಯ ಗುಂಪುಗಳ ಮೂಲಕ ಶಕ್ತಿಯುತ ಆಹಾರವನ್ನು ವಿತರಿಸಲಾಗುತ್ತದೆ.



*ಉತ್ಪಾದನಾ ಘಟಕದಲ್ಲಿ ಸ್ವಸಹಾಯ ಗುಂಪಿನ ಕೆಲಸಗಾರರು*

ಪೋಷಕಾಂಶಯುಕ್ತ ಶಕ್ತಿಯುತ ಆಹಾರವನ್ನು ಗ್ರಾಮೀಣ ಪೌಷ್ಠಿಕ ಸೇವಕರು (Village Nutrition Volunteers) ಹಾಗೂ ಸ್ವ–ಸಹಾಯ ಸಂಸ್ಥೆಗಳ ಮೂಲಕ ಫಲಾನುಭವಿಗಳಿಗೆ ವಿತರಿಸಲಾಗುವುದು.

**ಮುಂದುವರಿದ ಚಟುವಟಿಕೆಗಳು:**

- ಸ್ವ–ಸಹಾಯ ಸಂಸ್ಥೆಗಳನ್ನು (SHGs) ಬಲಪಡಿಸುವುದು.
- ಕೆಸಿಎನ್‌ಎಂ ತಯಾರಿಸಿದ ಶಿಕ್ಷಣ/ಸಂವಹನದ ಮಾಹಿತಿಯನ್ನು ಮನೆಮನೆಗೆ ತಲುಪಿಸುವುದು.
- ಪೌಷ್ಠಿಕತೆ/ಆಹಾರ ಪದ್ದತಿ/ಮಕ್ಕಳ ಪೋಷಣೆ/ಗರ್ಭಿಣಿ ಬಾಣಂತಿಯರ ಆರೋಗ್ಯ ಕುರಿತು ವಿಎನ್‌ವಿ ಮೂಲಕ ಮನೆಮನೆಗೆ ಮಾಹಿತಿ ಶಿಕ್ಷಣ ನೀಡುವುದು.
- ಪೋಷಕಾಂಶಯುಕ್ತ ಶಕ್ತಿಯುತ ಆಹಾರವನ್ನು ಮಕ್ಕಳಿಗೆ, ಹದಿಹರೆಯದ ಹೆಣ್ಣುಮಕ್ಕಳಿಗೆ, ಗರ್ಭಿಣಿಯರಿಗೆ ಮತ್ತು ಬಾಣಂತಿಯರಿಗೆ ಪೂರೈಸುವುದು.
- ಫಲಾನುಭವಿಗಳಿಗೆ ಒದಗಿಸಿದ ಮೇಲ್ವಿಚಾರಣೆ ಕಾರ್ಡುಗಳಲ್ಲಿ ಪ್ರತಿ ತಿಂಗಳು ಹೆಚ್ಚಳವಾಗಿರುವ ತೂಕವನ್ನು ಕ್ರಮವಾಗಿ ದಾಖಲಿಸುವುದು.
- ಗ್ರಾಮ ಪಂಚಾಯತಿಗಳನ್ನು ಸಂಪರ್ಕಿಸಿ ಶೌಚಾಲಯಗಳನ್ನು ನಿರ್ಮಿಸುವುದು. ಅಭಿಯಾನವು ಆರಂಭವಾದಾಗಿನಿಂದ ಇಲ್ಲಿಯವರೆಗೆ (ಅಕ್ಟೋಬರ್ 2016 ರಿಂದ ಮಾರ್ಚ್ 2018 ರವರೆಗೆ) 6623 ಶೌಚಾಲಯಗಳನ್ನು ನಿರ್ಮಿಸಲಾಗಿದೆ.
- ಶಕ್ತಿವೀಟಾ ಎಂಬ ಪೋಷಕಾಂಶಯುಕ್ತ ಶಕ್ತಿ ಆಹಾರವನ್ನು ಚಿಂಚೋಳ್ಳಿಯಲ್ಲಿ ಡಿಸೆಂಬರ್ 1, 2016 ರಿಂದ ಹಾಗೂ ದೇವದುರ್ಗದಲ್ಲಿ 1 ಫೆಬ್ರವರಿ 2017 ರಿಂದ ಪೂರೈಸಲಾಗುತ್ತಿದೆ.
- ಶಕ್ತಿವೀಟಾ ಬಗ್ಗೆ ಫಲಾನುಭವಿಗಳು ಸಂತಸ ವ್ಯಕ್ತಪಡಿಸಿದ್ದಾರೆ. ಅವರ ಆರೋಗ್ಯ ವರ್ಧಿಸಿದೆ. ಖಾಯಿಲೆಗಳು ಕಡಿಮೆಯಾಗಿದೆ. ಅವರ ಆಹಾರ ಪದ್ದತಿಯಲ್ಲೂ ಬದಲಾವಣೆ ಆಗಿದೆ. ಶಕ್ತಿವೀಟಾ ಜೊತೆಗೆ ಅವರ ಆದಾಯದ ಮಿತಿಯಲ್ಲಿ ಸ್ಥಳದಲ್ಲಿ ಲಭ್ಯವಾಗುವ ಕಾಯಿಪಲ್ಲೆ ಹಣ್ಣುಹಂಪಲು ಹಾಗೂ ಹಾಲಿನ ಉತ್ಪನ್ನಗಳನ್ನು ಸೇವಿಸುತ್ತಿದ್ದಾರೆ. ಹದಿಹರೆಯದ ಹೆಣ್ಣು ಮಕ್ಕಳ ಶಾಲಾ ಹಾಜರಾತಿಯೂ ಸುಧಾರಿಸಿದೆ.

## 1. <u>ಪೈಲಟ್ ಯೋಜನೆಯ ನವೀನ ಕಾರ್ಯಕ್ರಮಗಳು</u>

ಪೌಷ್ಠಿಕತೆಯನ್ನು ವಿಶ್ವವಿದ್ಯಾನಿಲಯಗಳಲ್ಲಿ ಒಂದು ಐಚ್ಛಿಕ ವಿಷಯವಾಗಿ ಭೋದಿಸಲು 30 ತಾಸುಗಳ ಪಠ್ಯಕ್ರಮವನ್ನು ಕೆಸಿಎನ್‌ಎಂ ಸಿದ್ದಪಡಿಸಿದೆ.

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ ಬೆಂಗಳೂರು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ (ಎನ್‌ಐಎನ್) ಹೈದರಾಬಾದ್, ಟಾಟಾ ಟ್ರಸ್ಟ್ ಮತ್ತು IDS SUSSEX ಅವರ ಸಹಕಾರದೊಂದಿಗೆ ಈ ಪಠ್ಯಕ್ರಮವನ್ನು ತಯಾರಿಸಿದೆ. ಸದರಿ ಪಠ್ಯಕ್ರಮವನ್ನು ಈ ಕೆಳಕಂಡ ವಿಶ್ವವಿದ್ಯಾನಿಲಯಗಳಲ್ಲಿ ಈ ವರ್ಷದಿಂದಲೇ ಪ್ರಾರಂಭಿಸಿದೆ.

1. ಮೌಂಟ್ ಕಾರ್ಮಲ್ ಕಾಲೇಜು, ಬೆಂಗಳೂರು
2. ಅಜೀಂ ಪ್ರೇಂಜಿ ಯೂನಿವರ್ಸಿಟಿ, ಬೆಂಗಳೂರು
3. ಅಕ್ಕಾಮಹಾದೇವಿ ಮಹಿಳಾ ವಿಶ್ವ ವಿದ್ಯಾನಿಲಯ, ವಿಜಯಪುರ

ಸದರಿ ಪಠ್ಯಕ್ರಮದ ಬಗ್ಗೆ ವಿಶ್ವವಿದ್ಯಾನಿಲಯದ ಉಪನ್ಯಾಸಕರಿಗೆ ದಿನಾಂಕ: 22, ಆಗ್ಸ್ಟ್ 2017 ಹಾಗೂ 8 ಜನವರಿ 2018 ರಂದು ತರಬೇತಿ ಶಿಬಿರ (Orientation Workshop) ವನ್ನು ಆಯೋಜಿಸಲಾಗಿತ್ತು.



*ದಿನಾಂಕ:02–02–2018 ರಂದು ಕರ್ನಾಟಕ ಸಮಗ್ರ ಪೌಷ್ಟಿಕಾಂಶ ಅಭಿಯಾನದಡಿ ಕರ್ನಾಟಕ ಮಲ್ಟಿ ಸೆಕ್ಟೋರಿಯಲ್ ಪೌಷ್ಠಿಕ ಪ್ರಾಯೋಗಿಕ ಕಾರ್ಯಾಗಾರವನ್ನು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಮೂಲಕ ಹಮ್ಮಿಕೊಳ್ಳಲಾಯಿತು.*

2. **ಪೋಷಕಾಂಶಯುಕ್ತ ಶಕ್ತಿಯುತ ಆಹಾರ ಪೂರೈಕೆ ಕುರಿತು ಕಾರ್ಯಸಾಧ್ಯತಾ ಅಧ್ಯಯನ.**
   ಖಾಸಿ ವಲಯದ ಮೂಲಕ ಶಕ್ತಿಯುತ ಆಹಾರವನನು ಮಾರುಕಟ್ಟೆಯಲ್ಲಿ ಸರಬರಾಜು ಮಾಡುವುದರ ಕುರಿತು ಕಾರ್ಯಸಾಧ್ಯತಾ ಅಧ್ಯಯನವನ್ನು ನಡೆಸಲಾಗುತ್ತಿದೆ. M/S KPMG Advisory Services Private Limited ಸಂಸ್ಥೆಗೆ ಸದರಿ ಕಾರ್ಯಸಾಧ್ಯತಾ ಅಧ್ಯಯನದ ಹೊಣೆಯನ್ನು ವಹಿಸಲಾಗಿದೆ. ದಿನಾಂಕ: 12.10.2017 ರಂದು ಈ ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಂಡಿದೆ. ಸಂಸ್ಥೆಯು Inception Report ಅನ್ನು ಸಲ್ಲಿಸಿದೆ. ಪ್ರಶ್ನಾವಳಿಯನ್ನು ಕೆಸಿಎನ್‌ಎಂ ಜೊತೆ ಸಮಾಲೋಚಿಸಿ ಅಂತಿಮಗೊಳಿಸಿದೆ. ಕ್ಷೇತ್ರ ಸಮೀಕ್ಷೆಯನ್ನು ಆರಂಭಿಸಿದೆ.

## ಪೌಷ್ಠಿಕತೆ ಮಾಪನಗಳಲ್ಲಿ ಸುಧಾರಣೆ
(Improvement in Nutrition Indicators)

ಯೋಜನೆಯನ್ನು ಪ್ರಾರಂಭಿಸಿದಾಗಿನಿಂದ ಉದ್ದೇಶಿತ ಫಲಾನುಭವಿಗಳ ಪೌಷ್ಠಿಕತಾ ಮಾಪನ (Indicators) ಗಳಲ್ಲಿ ಗಣನೀಯ ಸುಧಾರಣೆ ಕಂಡುಬಂದಿದೆ. ಕಡಿಮೆ ತೂಕದ ಮಕ್ಕಳ ಶೇಕಡಾವಾರು ಪ್ರಮಾಣವು ಶೇ.27% ಕ್ಕೆ ಕುಸಿತ ಕಂಡಿದೆ. ಸಹಜ Body Mass Index ಗಳಿಸಿರುವ ಹದಿಹರೆಯದ ಹೆಣ್ಣುಮಕ್ಕಳ ಶೇಕಡಾವಾರು ಸಂಖ್ಯೆ 44% ಕ್ಕೆ ಹೆಚ್ಚಳವಾಗಿದೆ. ಕಡಿಮೆ ತೂಕದ ಹಾಗೂ ಎತ್ತರಕ್ಕೆ ಸರಿಸಮನಾದ ತೂಕ ಇಲ್ಲದಿರುವ ಮಕ್ಕಳ ಸಂಖ್ಯೆಯ ಶೇಖಡಾವಾರು ಪ್ರಮಾಣವೂ ಸಹ ಇಳಿಕೆಯಾಗಿದೆ.

ಹೈದರಾಬಾದಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್ (ಎನ್‌ಐಎನ್) ಸಂಸ್ಥೆಯು ಕರ್ನಾಟಕ ಮಲ್ಟಿಸೆಕ್ಟೋರಲ್ ನ್ಯೂಟ್ರಿಷನ್ ಪೈಲಟ್‌ಪ್ರಾಜೆಕ್ಟ್‌ನ ಮೌಲ್ವೀಕರಣ (Impact Evaluation) ನಡೆಸಲು ಪ್ರಾರಂಭಿಸಿದೆ.

ದಿನಾಂಕ 5 ಜನವರಿ 2018 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಗೂ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಅಧ್ಯಕ್ಷತೆಯ ಉನ್ನತಾಧಿಕಾರ ಸಮಿತಿ ಸಭೆಯು ಸದರಿ ಪೈಲಟ್ ಯೋಜನೆಯ ವಿಶಿಷ್ಠ ಅಂಶಗಳನ್ನು (Unique features) ಕರ್ನಾಟಕ ಅಪೌಷ್ಠಿಕತೆ ಬಾಧಿತ ಬ್ಲಾಕ್‌ಗಳಿಗೆ ವಿಸ್ತರಿಸಬೇಕೆಂದು ತೀರ್ಮಾನಿಸಿದೆ.

## ಶ್ಯಾಮ್ ಪ್ರಸಾದ್ ಮುಖರ್ಜಿ ರುರ್ಬನ್ ಮಿಷನ್ (ಎಸ್‌ಪಿಎಂಆರ್‌ಎಂ)
## ರಾಷ್ಟ್ರೀಯ ರುರ್ಬನ್ ಮಿಷನ್ (ಎನ್‌ಆರ್‌ಯುಎಂ)

ಭಾರತ ಸರ್ಕಾರವು *ರಾಷ್ಟ್ರೀಯ ರುರ್ಬನ್ ಮಿಷನ್ (ಎನ್‌ಆರ್‌ಯುಎಂ)* ಎಂಬ ಯೋಜನೆಯನ್ನು ರೂಪಿಸಿದೆ. ಆರ್ಥಿಕ, ಸಾಮಾಜಿಕ ಮತ್ತು ಮೂಲಭೂತ ಸೌಕರ್ಯ ಒದಗಿಸಲು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶಹೊಂದಿದೆ. ಗ್ರಾಮೀಣ ಸಮುದಾಯ ಜೀವನದ ಮೂಲಭೂತವಾಗಿ ಸಂರಕ್ಷಿಸುವ ಮತ್ತು ಪೋಷಿಸುವ ಗ್ರಾಮಗಳ ಸಮೂಹವನ್ನು ಅಭಿವೃದ್ಧಿಪಡಿಸುವುದು ಮತ್ತು ಇಕ್ವಿಟಿ ಮತ್ತು ಅಂತರ್ಗತತೆಗಳ ಮೇಲೆ ಗಮನ ಹರಿಸಲು ಎನ್‌ಆರ್‌ಯುಎಂನ ದೃಷ್ಟಿಕೋನವು 'ರೂರ್ಬನ್ ಗ್ರಾಮಗಳ ಒಂದು ಕ್ಲಸ್ಟರ್' ಸೃಷ್ಟಿಸಲಾಗುತ್ತದೆ. ಭಾರತ ಜನಗಣತಿಯ ಪ್ರಕಾರ ಗ್ರಾಮೀಣ ಪ್ರದೇಶದ ಜನಸಂಖ್ಯೆ 833 ಮಿಲಿಯನ್ ನಷ್ಟಿರುತ್ತದೆ, ಒಟ್ಟು 68 ರಷ್ಟು ಜನಸಂಖ್ಯೆ ಇದೆ. 2001–2011 ರ ಅವಧಿಯಲ್ಲಿ ಗ್ರಾಮೀಣ ಪ್ರದೇಶದ ಜನಸಂಖ್ಯೆ 12 ರಷ್ಟು ಬೆಳವಣಿಗೆಯಾಗಿದೆ ಮತ್ತು ಅದೇ ಅವಧಿಯಲ್ಲಿ 2279 ಘಟಕಗಳ ಸಂಪೂರ್ಣ ಸಂಖ್ಯೆಯ ಹಳ್ಳಿಗಳಲ್ಲಿ ಹೆಚ್ಚಳ ಕಂಡುಬಂದಿದೆ.

ಸಮೂಹಗಳ ಅನುಕೂಲತೆಗಾಗಿ ಆರ್ಥಿಕ ದೃಷ್ಟಿಕೋನದಿಂದ ಮತ್ತು ಮೂಲಭೂತ ಸೌಕರ್ಯಗಳ ಅನುಕೂಲಗಳನ್ನು ಉತ್ತಮಗೊಳಿಸುವ ಸಮೂಹಗಳ ಪ್ರಯೋಜನೆಗಳನ್ನು ಪರಿಗಣಿಸುವ ದೃಷ್ಟಿಯಿಂದ ಮಿಷನ್ ಮುಂದಿನ ಐದು ವರ್ಷಗಳಲ್ಲಿ 300 ರುರ್ಬನ್ ಸಮೂಹಗಳ ಅಭಿವೃದ್ಧಿಯ ಉದ್ದೇಶ ಹೊಂದಿದೆ.

ಸ್ಥಳೀಯ ಆರ್ಥಿಕ ಅಭಿವೃದ್ಧಿಯನ್ನು ಅನುಕರಿಸಲು ಮತ್ತು ಮೂಲಭೂತ ಸೇವೆಗಳನ್ನು ಹೆಚ್ಚಿಸಲು ಮತ್ತು ಯೋಜಿತ ರುರ್ಬನ್ ಸಮೂಹಗಳನ್ನು ರಚಿಸಲು ಮಿಷನ್ ಉದ್ದೇಶಿಸಿದೆ. ಕರ್ನಾಟಕದಲ್ಲಿ ರುರ್ಬನ್ ಸಮೂಹಗಳನ್ನು ಅಬಿವೃದ್ಧಿಪಡಿಸುವುದು ಮತ್ತು ಬೆಳವಣಿಗೆಗೆ ಸೂಕ್ತ ಸಾಮರ್ಥ್ಯ ಹೊಂದಿರುತ್ತದೆ.

ಈ ಮಿಷನ್ ಅಡಿಯಲ್ಲಿ ಆರ್ಥಿಕ ಚಟುವಟಿಕೆಗಳಿಗೆ ತರಬೇತಿ, ಉದ್ಯಮಶೀಲ ಕೌಶಲ್ಯ ಮತ್ತು ಸ್ಥಳೀಯ ಉದ್ಯಮಶೀಲತೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರುವ ಯೋಜನೆಯಂತೆ ಪ್ರತಿ ರುರ್ಬನ್ ಕ್ಲಸ್ಟರ್ ಅಭಿವೃದ್ದಿಪಡಿಸಲಾಗುವುದು ಮತ್ತು ಅಗತ್ಯ ಮೂಲಭೂತ ಸೌಕರ್ಯ ಒದಗಿಸುತ್ತದೆ. ಯೋಜನಾ ಘಟಕಗಳ ಅನುಷ್ಠಾನಕ್ಕೆ ಸಂಯೋಜಿಸುವ ಮತ್ತು ಒಗ್ಗೂಡಿಸುವ ಮೂಲಕ ಈ ಯೋಜನೆಗಳನ್ನು ಮೂರು ವರ್ಷಗಳ ಸ್ಥಿರ ಅವಧಿಗೆ ಅನುಷ್ಠಾನಗೊಳಿಸಲಾಗುವುದು.

### ಮಿಷನ್ ಉದ್ದೇಶ:

ಸ್ಥಳೀಯ ಆರ್ಥಿಕ ಅಭಿವೃದ್ಧಿಯನ್ನು ಉತ್ತೇಜಿಸುವುದು, ಮೂಲಭೂತ ಸೇವೆಗಳನ್ನು ಹೆಚ್ಚಿಸುವುದು ಮತ್ತು ಯೋಜಿತ ರುರ್ಬನ್ ಕ್ಲಸ್ಟರ್ ರಚಿಸುವುದು *ರಾಷ್ಟ್ರೀಯ ರುರ್ಬನ್ ಮಿಷನ್ (ಎನ್‌ಆರ್‌ಯುಎಂ)* ನ ಮುಖ್ಯ ಉದ್ದೇಶವಾಗಿದೆ.

**ಮಿಷನ್ ಫಲಿತಾಂಶಗಳು:**

ಈ ಮಿಷನ್ ಅಡಿಯಲ್ಲಿ ನಿರೀಕ್ಷಿತ ಮುಖ್ಯ ಫಲಿತಾಂಶಗಳು:

i. ಗ್ರಾಮೀಣ ಮತ್ತು ನಗರ ವಿಭಜನೆಯನ್ನು ಆರ್ಥಿಕ, ತಾಂತ್ರಿಕ ಮತ್ತು ಮೂಲಭೂತ ಸೌಲಭ್ಯಗಳು ಮತ್ತು ಸೇವೆಗಳಿಗೆ ಸಂಬಂಧಿಸಿದವುಗಳನ್ನು ಬ್ರಿಡ್ಜಿಂಗ್ ಮಾಡುವುದು.

ii. ಗ್ರಾಮೀಣ ಪ್ರದೇಶಗಳಲ್ಲಿ ಬಡತನ ಮತ್ತು ನಿರುದ್ಯೋಗವನ್ನು ಕಡಿತಗೊಳಿಸುವ ಮಹತ್ವದೊಂದಿಗೆ ಸ್ಥಳೀಯ ಆರ್ಥಿಕ ಅಭಿವೃದ್ಧಿಪಡಿಸುವುದು.

iii. ಗ್ರಾಮೀಣ ಪ್ರದೇಶದ ಬೆಳವಣಿಗೆಯನ್ನು ಅಭಿವೃದ್ಧಿಪಡಿಸುವುದನ್ನು ಪ್ರಸಾರ ಮಾಡುವುದು.

iv. ಗ್ರಾಮೀಣ ಪ್ರದೇಶದಲ್ಲಿ ಬಂಡವಾಳವನ್ನು ಆಕರ್ಷಿಸುವುದು.

ಈ ಯೋಜನೆಯು ಹತ್ತು ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆ ಅನುಷ್ಠಾನಗೊಳಿಸಲಾಗುವುದು. ರುರ್ಬನ್ ಮಿಷನ್ ಅನುಷ್ಠಾನದಲ್ಲಿ ರಾಜ್ಯವು ಮುಖ್ಯ ನಿರೂಪಕರಾಗಿ ಮತ್ತು ಪ್ರಮುಖ ಅನುಷ್ಠಾನಕಾರರಾಗಿ ಕಾರ್ಯ ನಿರ್ವಹಿಸುವುದು. ರಾಷ್ಟ್ರೀಯ, ರಾಜ್ಯ, ಜಿಲ್ಲೆ ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಪ್ರಮುಖ ಪಾಲುದಾರರನ್ನು ಸಾಂಸ್ಥಿಕ ರಚನೆ ಮತ್ತು ವಿವಿಧ ಮಾರ್ಗದರ್ಶನಗಳು ಮತ್ತು ಚೌಕಟ್ಟುಗಳ ಪ್ರಕಾರ ರುರ್ಬನ್ ಮಿಷನ್ ಅನುಷ್ಠಾನಗೊಳಿಸಲಾಗುವುದು.

ರಾಜ್ಯದಲ್ಲಿ ಬೆಂಗಳೂರು ನಗರ ಜಿಲ್ಲೆಯ ಆನೆಕಲ್ ತಾಲ್ಲೂಕು, ಹಾರಗದ್ದೆ, (Non-Tribal Cluster), ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ದಾನಾಪುರ (Tribal Cluster) ಮತ್ತು ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಕಂಗ್ರಾಳಿ (Non-Tribal Cluster) ಗಳ ಅನುಷ್ಠಾನಕ್ಕೆ ಮೊದಲನೇ ಹಂತಕ್ಕೆ ಆಯ್ಕೆಯಾದ ಮೂರು ಸಮೂಹಗಳಾಗಿವೆ.

**ಮೂರು ICAPs ಗಳ ಸಾರಾಂಶ:**

**(ರೂ.ಕೋಟಿಗಳಲ್ಲಿ)**

| ಕ್ರ.ಸಂ. | ಕ್ಲಸ್ಟರ್ ಹೆಸರು | ಅಂದಾಜು ಅನುದಾನ | ಶೇ.30 ರಷ್ಟು ಅನುದಾನ | CGF | CGF | ಒಗ್ಗೂಡಿಸುವಿಕೆಯಿಂದ ವಿವಿಧ ಸಂಪನ್ಮೂಲಗಳ ಅನುದಾನ |
|---|---|---|---|---|---|---|
| 1 | ಹಾರಗದ್ದೆ | 100.71 | 30.21 | 30.00 | 30.00 | 70.71 |
| 2 | ಕಂಗ್ರಾಳಿ | 116.91 | 35.07 | 30.00 | 30.00 | 86.91 |
| 3 | ದಾನಪುರ | 52.47 | 15.74 | 15.74 | 15.00 | 37.47 |
| **Total** | | **270.09** | **81.02** | **75.74** | **75.00** | **195.09** |

ಶ್ಯಾಮ ಪ್ರಸಾದ್ ಮುಖರ್ಜಿ ರುರ್ಬನ್ ಮಿಷನ್ ರಡಿ (SPMRM), 2015–16 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದ ಅನುದಾನ ಪತ್ರ ಸಂಖ್ಯೆ: J-12011/13/2016-17 Rurban (Sl.No.10) ದಿನಾಂಕ:10–03–2016.

| ಕ್ರ.ಸಂ. | ಜಿಲ್ಲೆ | ಉಪ ಜಿಲ್ಲೆ | ಕ್ಲಸ್ಟರ್ ಹೆಸರು | ಕ್ಲಸ್ಟರ್ | ಶೇ.30 ರಷ್ಟು ಅನುದಾನ |
|---|---|---|---|---|---|
| 1 | ಬೆಂಗಳೂರು ನಗರ | ಆನೇಕಲ್ | ಹಾರಗದ್ದೆ | Non Tribal | 35.00 |
| 2 | ಬೆಳಗಾವಿ | ಬೆಳಗಾವಿ | ಕಂಗ್ರಾಳಿ | Non Tribal | 35.00 |
| 3 | ಬಳ್ಳಾರಿ | ಹೊಸಪೇಟೆ | ದಾನಪುರ | Tribal | 25.00 |
| **Total** | | | | | **95.00** |

ಈ ಕೆಳಕಂಡ ನಿಬಂಧನೆಗಳಂತೆ ಅನುದಾನ ಬಿಡುಗಡೆ ಮಾಡಲಾಗುವುದು:

i. ಸಮಗ್ರ ಕ್ಲಸ್ಟರ್ ಕ್ರಿಯಾ ಯೋಜನೆ ತಯಾರಿಕೆಗೆ ಅನುದಾನ ಉಪಯೋಗಿಸುವುದು.
ii. ರಾಜ್ಯ ಸರ್ಕಾರವು ಈ ಅನುದಾನವನ್ನು SPMRM ಯೋಜನೆಯ ಸಾಂಸ್ಥಿಕ ರಚನೆಗೂ ಉಪಯೋಗಿಸಬಹುದಾಗಿದೆ.

iii. ಸಂಬಂಧಿಸಿದ ಅನುದಾನವನ್ನು SPMRM ಯೋಜನೆಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಯಂತೆ ಅನುದಾನ ವಿನಿಯೋಗಿಸುವುದು.

iv. ಅನುದಾನ ಬಿಡುಗಡೆ ಆಂತರಿಕ ಆಡಿಟ್‌ಗೆ ಒಳಪಟ್ಟಿರುತ್ತದೆ.

v. ಬಿಡುಗಡೆಯಾದ ಅನುದಾನ ಕ್ರ.ಸಂ. (i) & (ii) ರಂತೆ ಬೇರೆ ಯಾವ ಚಟುವಟಿಕೆಗೂ ವಿನಿಯೋಗವಾಗದಂತೆ ಕ್ರಮವಹಿಸುವುದು.

**ಇನ್ನೋವೆಷನ್ ಅನುದಾನ:** ಆಯವ್ಯಯದಲ್ಲಿ ಶೇಕಡ 5 ರಷ್ಟು ಹೆಚ್ಚುವರಿ ಅನುದಾನವನ್ನು ಸಿಜಿಎಫ್ ಗಾಗಿ ನೂತನ ಅಧ್ಯಯನ ಮತ್ತು ಅಭಿವೃದ್ಧಿ, ರಾಜ್ಯ ತಾಂತ್ರಿಕ ಬೆಂಬಲ ಏಜೆನ್ಸಿಗಳಿಗೆ, ಸಾಮರ್ಥ್ಯ ಬಲವರ್ಧನೆ, ಅವಾರ್ಡ್ ಮತ್ತು ಇತರೆ ಮಿಷನ್‌ಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಅನುದಾನವನ್ನು ಒದಗಿಸಲಾಗುವುದು.

2016–17 ನೇ ಸಾಲಿನಲ್ಲಿ ಮೊದಲನೇ ಹಂತಕ್ಕೆ ಕೇಂದ್ರ ಸರ್ಕಾರದ ಪಾಲಿನ ರೂ.13.50 ಕೋಟಿಗಳ ಅನುದಾನ ಆದೇಶ ಪತ್ರ ಸಂಖ್ಯೆ: J-15017/01/2016 -Rurban /Sl.No.34) ದಿನಾಂಕ 16–03–2016 ರಲ್ಲಿ ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಕ್ಲಸ್ಟರ್ ಹೆಸರು | ಅಂದಾಜು ಮೊತ್ತ | ಸಿಜಿಎಫ್ ಅನುದಾನ | ಮೊದಲನೆ ಕಂತಿನ ಅನುದಾನ (ಕೇಂದ್ರದ ಪಾಲು) |
|---|---|---|---|---|
| 1 | ಹಾರಗದ್ದೆ (Non Tribal) | 100.71 | 30.00 | 5.40 |
| 2 | ಕಂಗ್ರಾಳಿ (Non Tribal) | 116.91 | 30.00 | 5.40 |
| 3 | ದಾನಪುರ(Tribal) | 52.47 | 15.00 | 2.70 |
| | **Total** | **270.09** | **75.00** | **13.50** |

**ಘಟಕವಾರು ಆಯವ್ಯಯ ಮತ್ತು ಡಿಸೆಂಬರ್ 2017–18 ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ವಿವರ**

| **ಯೋಜನೆ ಹೆಸರು: ಎನ್‌ಆರ್‌ಎಲ್‌ಎಂ** | | | | | | | | | | | | |
|---|---|---|---|---|---|---|---|---|---|---|---|---|
| | | | | | | | | | | | **(ರೂ.ಕೋಟಿಗಳಲ್ಲಿ)** | |
| ಕ್ರ.ಸಂ. | ಘಟಕವಾರು ವಿವರ | ಆಯವ್ಯಯ | ಆರಂಭಿಕ ಶುಲ್ಕ | ಬಿಡುಗಡೆಯಾದ ಅನುದಾನ | ಅನುದಾನ | ಖರ್ಚು | % | | ಘಟಕ | ಭೌತಿಕ ಗುರಿ | ಭೌತಿಕ ಸಾಧನೆ | % |
| | | | | | | | ಆಯವ್ಯಯ | ಅನುದಾನ | | | | |
| 1 | ರೂರ್ಬನ್ | 66.67 | 0.00 | 1.05 | 1.05 | 0.75 | 1 | 71.00 | | | ಡಿಪಿಆರ್ ಅನುಮೋದನೆ ಪ್ರಗತಿಯಲ್ಲಿದೆ | |
| **ಒಟ್ಟು ವೆಚ್ಚ** | | **66.67** | **0.00** | **1.05** | **1.05** | **0.75** | **1** | **71.00** | | | | |

\

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಸಾಧನೆ**

**2017–18 ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ**

| ಕ್ರ. ಸಂ. | ವರ್ಗ | ಒಟ್ಟು ಅಧಿಕಾರಿ/ ಸಿಬ್ಬಂದಿಗಳ ಸಂಖ್ಯೆ | ಪುರುಷರು | ಮಹಿಳೆಯರು | ಪ.ಜಾ. | ಪ.ಪಂ |
|---|---|---|---|---|---|---|
| 1 | ಎ | 01 | 01 | | | |
| 2 | ಬಿ | 03 | 02 | | 01 (ಮಹಿಳೆ) | |
| 3 | ಸಿ | 03 | 01 | 02 | | |
| 4 | ಡಿ | | | | | |

**2017–18 ನೇ ಸಾಲಿನಲ್ಲಿ ಸೇವೆ ಸಲ್ಲಿಸುತ್ತಿರುವ ಹೊರಗುತ್ತಿಗೆ ನೌಕರರ ವಿವರ**

| ಕ್ರ. ಸಂ. | ಹುದ್ದೆ | ಸಂಖ್ಯೆ |
|---|---|---|
| 1 | ಡಾಟಾ ಎಂಟ್ರಿ ಆಪರೇಟರ್ಸ್ | 61 |
| 2 | ಗ್ರೂಪ್ ಡಿ | 05 |
| 3 | ವಾಹನ ಚಾಲಕರು | 03 |
| 4 | ಪ್ರೊಗ್ರಾಂ ಮ್ಯಾನೇಜರ್/ಸಲಹೆಗಾರರು/ಯೋಜನಾ ನಿರ್ವಾಹಕರು/ಸಹಾಯಕರು | 253 |
| | **ಒಟ್ಟು** | **322** |

**ವಿಧಾನಸಭೆ, ವಿಧಾನ ಪರಿಷತ್ತು, ಗಮನ ಸೆಳೆಯುವ ಸೂಚನೆ ಹಾಗೂ ಭರವಸೆಗಳಿಗೆ ಉತ್ತರಿಸಿದ ವಿವರ**

| ವಿಧಾನಸಭೆ ಪ್ರಶ್ನೆಗಳು | | ವಿಧಾನ ಪರಿಷತ್ತು ಪ್ರಶ್ನೆಗಳು | | ಗಮನ ಸೆಳೆಯುವ ಸೂಚನೆಗೆ ಉತ್ತರಗಳು | | ಮುಂದಿನ ಅಧಿವೇಶನದಲ್ಲಿ ಉತ್ತರಿಸಬೇಕಾದ ಪ್ರಶ್ನೆಗಳು | |
|---|---|---|---|---|---|---|---|
| ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ಒಟ್ಟು ಸ್ವೀಕೃತ ಸಂಖ್ಯೆ | ಉತ್ತರಿಸಿದ ಸಂಖ್ಯೆ | ವಿಧಾನಸಭೆ | ವಿಧಾನ ಪರಿಷತ್ತು |
| 40 | 40 | 12 | 12 | – | – | – | – |

**ಮಾಹಿತಿ ಹಕ್ಕು ಅಧಿನಿಯಮ–2005**

| ಸ್ವೀಕರಿಸಿದ ಒಟ್ಟು ಅರ್ಜಿಗಳು | ನಿಗದಿತ ಕಾಲಾವಧಿಯಲ್ಲಿ ಉತ್ತರಿಸಿದ ಅರ್ಜಿಗಳು | ಸ್ವೀಕರಿಸಿದ ಅರ್ಜಿ ಶುಲ್ಕ + ದಾಖಲೆ ಪ್ರತಿಗಳನ್ನು ನೀಡಲು ಸ್ವೀಕರಿಸಿದ ಮೊತ್ತ (ರೂ.ಗಳಲ್ಲಿ) | ಮೇಲ್ಮನವಿ ನಂತರ ಇತ್ಯರ್ಥಗೊಳಿಸಿದ ಅರ್ಜಿಗಳು | | ವಿಧಿಸಿದ ದಂಡ (ರೂ.ಗಳಲ್ಲಿ) |
|---|---|---|---|---|---|
| | | | ಮೇಲ್ಮನವಿ ಪ್ರಾಧಿಕಾರ ಇತ್ಯರ್ಥಗೊಳಿಸಿದ ಸಂಖ್ಯೆ | ಮಾಹಿತಿ ಹಕ್ಕು ಆಯೋಗದಿಂದ ಇತ್ಯರ್ಥಗೊಳಿಸಿದ ಸಂಖ್ಯೆ | |
| **2** | **2** | **60** | **–** | **–** | **–** |